2. ಸಂತಾಪ ಸೂಚನೆ

ವಿಷಯ: ರಾಜ್ಯದ ಮಾಜಿ ಸಚಿವರಾಗಿದ್ದ ಬಿ.ಇ. ರಾಮಯ್ಯ, ಕೆ.ಬಿ. ಮಲ್ಲಪ್ಪ ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಸಿ.ಎಂ.ಎಸ್. ಶಾಸ್ತ್ರಿ, ಆದಿಚುಂಚನಗಿರಿ ಮಠದ ಯತಿಗಳಾಗಿದ್ದ ಡಾ: ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಹರಿಹರದ ವೀರಶೈವ ಪಂಚಮಶಾಲಿ ಪೀಠದ ಪೀಠಾಧ್ಯಕ್ಷರಾಗಿದ್ದ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮುಂತಾದವರ ನಿಧನದ ಬಗ್ಗೆ.

ಮಾನ್ಯ ಸಭಾಧ್ಯಕ್ಷರು:

ರಾಜ್ಯದ ಮಾಜಿ ಸಚಿವರಾಗಿದ್ದ ಬಿ.ಇ. ರಾಮಯ್ಯ, ಕೆ.ಬಿ. ಮಲ್ಲಪ್ಪ ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಸಿ.ಎಂ.ಎಸ್. ಶಾಸ್ತ್ರಿ, ಆದಿಚುಂಚನಗಿರಿ ಮಠದ ಯತಿಗಳಾಗಿದ್ದ ಡಾ. ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಹರಿಹರದ ವೀರಶೈವ ಪಂಚಮಸಾಲಿ ಪೀಠದ ಪೀಠಾಧ್ಯಕ್ಷರಾಗಿದ್ದ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಬಿ.ಇ. ರಾಮಯ್ಯ

ಬಿ.ಇ. ರಾಮಯ್ಯ ಅವರು 1ನೇ ಜೂನ್ 1932 ರಂದು ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಬಾಗೇವಾಡಿಯಲ್ಲಿ ಜನಿಸಿದ್ದು, ಬಿ.ಎ. ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರು ಮತ್ತು ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. ಶಿಕ್ಷಣ ಸಂಸ್ಥೆಗಳನ್ನು ಸಂಸ್ಥಾಪಿಸಿದ್ದರಲ್ಲದೆ, ಹಲವಾರು ಸಂಘ-ಸಂಸ್ಥೆಗಳ, ಸಹಕಾರಿ ಬ್ಯಾಂಕುಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು 1957, 1972 ಹಾಗೂ 1978 ರಲ್ಲಿ ಅನುಕ್ರಮವಾಗಿ 2, 5 ಮತ್ತು 6ನೇ ವಿಧಾನಸಭೆಗೆ ಸಿರಗುಪ್ಪ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಅಲ್ಲದೇ, 1979ರಲ್ಲಿ ಯೋಜನಾ ಖಾತೆಯ ಸಚಿವರಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ.

ಬಿ.ಇ. ರಾಮಯ್ಯ ಅವರು ದಿನಾಂಕ 02.01.2013 ರಂದು ನಿಧನ ಹೊಂದಿರುತ್ತಾರೆ.

2. ಕೆ.ಬಿ. ಮಲ್ಲಪ್ಪ

ಕೆ.ಬಿ. ಮಲ್ಲಪ್ಪ ಅವರು 1931ರಲ್ಲಿ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ಕಡೆವಿನಹೊಸಹಳ್ಳಿಯಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು ಮತ್ತು ವೃತ್ತಿಯಲ್ಲಿ ಕೃಷಿಕರಾಗಿದ್ದರು.

ದಿವಂಗತರು ಅರಕಲಗೂಡು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ತಾಲ್ಲೂಕು ಬೋರ್ಡ್ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ಕೆ.ಬಿ. ಮಲ್ಲಪ್ಪ ಅವರು 1978, 1983 ಮತ್ತು 1985 ರಲ್ಲಿ ಕ್ರಮವಾಗಿ 6, 7 ಹಾಗೂ 8ನೇ ವಿಧಾನಸಭೆಗೆ ಅರಕಲಗೂಡು ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ ಅಲ್ಲದೇ ದಿನಾಂಕ 27.04.1987 ರಿಂದ 15.08.1988 ರವರೆಗೆ ಕೃಷಿ ಮಾರುಕಟ್ಟೆ ಸಚಿವರಾಗಿ ಮತ್ತು 15.04.1989 ರಿಂದ 21.04.1989 ರವರೆಗೆ ಸಹಕಾರ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಕೆ.ಬಿ. ಮಲ್ಲಪ್ಪ ಅವರು ದಿನಾಂಕ 05.01.2013 ರಂದು ನಿಧನ ಹೊಂದಿರುತ್ತಾರೆ.

3. ಸಿ.ಎಂ.ಎಸ್. ಶಾಸ್ತ್ರಿ

ಸಿ.ಎಂ.ಎಸ್. ಶಾಸ್ತ್ರಿಯವರು ದಿನಾಂಕ 17ನೇ ಆಗಸ್ಟ್ 1921 ರಂದು ಚಿಕ್ಕಮಗಳೂರಿನಲ್ಲಿ ಜನಿಸಿದ್ದು, ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ವೃತ್ತಿಯಲ್ಲಿ ಕೃಷಿಕರು ಮತ್ತು ಪ್ರವೃತ್ತಿಯಲ್ಲಿ ಕೈಗಾರಿಕೋದ್ಯಮಿಯಾಗಿದ್ದರು.

ದಿವಂಗತರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರಲ್ಲದೆ 1942ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು.

ಶಾಸ್ತ್ರಿಯವರು 1967 ರಲ್ಲಿ 4ನೇ ವಿಧಾನಸಭೆಗೆ ಚಿಕ್ಕಮಗಳೂರು ಕ್ಷೇತ್ರದಿಂದ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ.

ಸಿ.ಎಂ.ಎಸ್. ಶಾಸ್ತ್ರಿಯವರು ದಿನಾಂಕ 07.01.2013 ರಂದು ನಿಧನ ಹೊಂದಿರುತ್ತಾರೆ.

4. ಡಾ: ಬಾಲಗಂಗಾಧರನಾಥ ಸ್ವಾಮೀಜಿ

ಚತುರ್ಮುಖ ಸಿದ್ಧಿಪುರುಷ ಬಾಲಗಂಗಾಧರನಾಥ ಸ್ವಾಮೀಜಿಯವರು ದಿನಾಂಕ 18ನೇ ಜನವರಿ 1945 ರಂದು ರಾಮನಗರ ಜಿಲ್ಲೆಯ ಬಾನಂದೂರು ಗ್ರಾಮದಲ್ಲಿ ಜನಿಸಿದ್ದು, ಬಿ.ಎಸ್ಸಿ ಪದವೀಧರರಾಗಿದ್ದರು. 19ನೇ ವಯಸ್ಸಿನಲ್ಲಿಯೇ ಧಾರ್ಮಿಕ ಚಿಂತನೆಯನ್ನು ಹೊಂದಿ ಧರ್ಮಶಾಸ್ತ್ರ ಮತ್ತು ವೇದಾಧ್ಯಯನವನ್ನು ಪೂರೈಸಿರುತ್ತಾರೆ.

1974ರಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿ ಸನ್ಯಾಸ ದೀಕ್ಷೆಯನ್ನು ಪಡೆದುಕೊಂಡಿರುತ್ತಾರೆ.

ಶ್ರೀಗಳು ನೂರಾರು ಶಾಲಾ ಕಾಲೇಜುಗಳನ್ನು, ಮಹಾವಿದ್ಯಾಲಯಗಳನ್ನು ಮತ್ತು ಧರ್ಮಶಾಲೆಗಳನ್ನು ಸ್ಥಾಪಿಸುವುದರ ಮೂಲಕ ರಾಜ್ಯದ ಅಕ್ಷರ ದಾಸೋಹಿಯಾಗಿದ್ದರಲ್ಲದೆ ಪರಿಸರ ಪ್ರೇಮಿಯು ಆಗಿದ್ದರು ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಅಪಾರ ಕೊಡುಗೆ ಸಲ್ಲಿಸಿದ್ದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಶೈಕ್ಷಣಿಕ, ಸಾಮಾಜಿಕ, ಆರೋಗ್ಯ ಹಾಗೂ ಧಾರ್ಮಿಕ ಕ್ಷೇತ್ರಗಳಿಗೆ ಸಲ್ಲಿಸಿರುವ ಕೊಡುಗೆ ಅನನ್ಯ. ಶ್ರೀಗಳು ಅತ್ಯುನ್ನತ ಪದ್ಮಭೂಷಣ ಪ್ರಶಸ್ತಿಯನ್ನು ಒಳಗೊಂಡಂತೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ನಿಧನದಿಂದ ಧಾರ್ಮಿಕ ಕ್ಷೇತ್ರವು ಬಡವಾದಂತಾಗಿದೆ.

ಬಾಲಗಂಗಾಧರನಾಥ ಸ್ವಾಮೀಜಿವರು ದಿನಾಂಕ 13.01.2013 ರಂದು ನಿಧನ ಹೊಂದಿರುತ್ತಾರೆ.

5. ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ

ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ದಿನಾಂಕ 29ನೇ ಸೆಪ್ಟಂಬರ್ 1938 ರಂದು ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕು ಮನಗೂಳಿ ಗ್ರಾಮದಲ್ಲಿ ಜನಿಸಿದ್ದು, ಬಸವೇಶ್ವರ ಕಾಲೇಜಿನಲ್ಲಿ ಪದವಿ, ಕಾಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ, ಪ್ರಯಾಗ ವಿಶ್ವವಿದ್ಯಾಲಯದಿಂದ ಹಿಂದಿ ಸಾಹಿತ್ಯ ವಿಚಾರದಲ್ಲಿ ಮತ್ತು ವಾರಣಾಸಿ ಸಂಸ್ಕೃತ ಮತ್ತು ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯುವುದರ ಜೊತೆಗೆ "ದಿ ಕಾನ್ಸೆಪ್ಟ್ ಆಫ್ ಅಲ್ಟಿಮೇಟ್ ರಿಯಾಲಿಟಿ ಇನ್ ವೀರಶೈವಿಸಂ ಅಂಡ್ ಅದ್ವೈತ ವೇದಾಂತ – ಎ ಕಂಪ್ಲೀಟ್ ಸ್ಟಡಿ" ವಿಷಯದಲ್ಲಿ ಡಾಕ್ಟರೇಟ್ ಪದವಿಯನ್ನು ಸಹ ಪಡೆದುಕೊಂಡಿದ್ದರು.

1983 ರಲ್ಲಿ ಹರಿಹರದಲ್ಲಿರುವ ಪಂಚಮಸಾಲಿ ಪೀಠದ ಪೀಠಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ.

ಡಾ: ಮಹಾಂತ ಶಿವಾಚಾರ್ಯ ಸ್ವಾಮೀಜಿಗಳು ಸೌಮ್ಯ ಸ್ವಭಾವದ ಸಮಾಜಮುಖಿ ಸಂತರಾಗಿದ್ದರಲ್ಲದೆ, ಅಧ್ಯಾತ್ಮ ರಂಗದಲ್ಲಿ ಮತ್ತು ಸಂಸ್ಕೃತ ವಿಷಯದಲ್ಲಿ ಧೀಮಂತ ಯುಗಪುರುಷರಾಗಿದ್ದರು.

ಡಾ: ಮಹಾಂತಲಿಂಗ ಸ್ವಾಮೀಜಿ ಅವರು ದಿನಾಂಕ 04.02.2013 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):- ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯದ ಹಿರಿಯರು, ಪ್ರಮುಖರು ಇತ್ತೀಚೆಗೆ ನಮ್ಮನ್ನು ಅಗಲಿರುವಂಥ ಈ ಸಂದರ್ಭದಲ್ಲಿ ತಾವು ಮಂಡನೆ ಮಾಡಿರುವ ಈ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಪೂಜ್ಯರಾದಂಥ ಬಾಲಗಂಗಾಧರನಾಥ ಸ್ವಾಮೀಜಿಯವರು ಇತ್ತೀಚೆಗೆ ಈ ಒಂದು ಜಗತ್ತನ್ನು, ಈ ಒಂದು ಸಮಾಜವನ್ನು ಬಿಟ್ಟು ಅಗಲಿದ್ದಾರೆ. ಪೂಜ್ಯ ಸ್ವಾಮೀಜಿಯವರ ಅಂತ್ಯಕ್ರಿಯೆಯ ಕಾರ್ಯಕ್ರಮದಲ್ಲಿ ನಾವೆಲ್ಲ ಭಾಗವಹಿಸಿದ್ದೆವು. ಲಕ್ಷಾಂತರ ಜನ ಭಕ್ತಾದಿಗಳು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ಜನರಿಗೆ ಅವರ ಮೇಲೆ ಇದ್ದಂಥ ಭಕ್ತಿ, ಪ್ರೀತಿ, ವಿಶ್ವಾಸ ಮತ್ತು ಸಮಾಜದಲ್ಲಿ ಜಾಗೃತಿಯನ್ನು ಮೂಡಿಸುವಂಥ ಕೆಲಸವನ್ನು ಪೂಜ್ಯ ಸ್ವಾಮೀಜಿಯವರು ಏನು ಮಾಡಿದ್ದರು, ಅದಕ್ಕೆ ಲಕ್ಷಾಂತರ ಜನ ಸಾಕ್ಷೀಭೂತರಾಗಿದ್ದರು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿಯವರು ಸಮಾಜದ ಉನ್ನತಿಗಾಗಿ, ಅದರಲ್ಲೂ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಬಹಳಷ್ಟು ಕೆಲಸಗಳನ್ನು ಮಾಡಿದ್ದರು. ಪರಿಸರಕ್ಕೆ ಸಂಬಂಧಪಟ್ಟಂತೆ ಬಹಳ ಉನ್ನತವಾದಂಥ ಕೆಲಸವನ್ನು ಪೂಜ್ಯ ಸ್ವಾಮೀಜಿಯವರು ಮಾಡಿದ್ದರು. ಒಂದು ಚಿಕ್ಕ ನದಿಯಂತಿದ್ದ ಆದಿಚುಂಚನಗಿರಿ ಸಂಸ್ಥಾನವನ್ನು ಸಾಗರಸದೃಶವಾಗಿ ಬೆಳೆಸಿದಂಥ ಒಂದು ಹಿರಿಮೆ ಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿಯವರದು. ಪೂಜ್ಯರು ಆದಿಚುಂಚನಗಿರಿ ಸಂಸ್ಥಾನದಿಂದ ನೂರಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣದವರೆಗೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ಬೆಳೆಸಿ ಸಮಾಜಕ್ಕೆ ಶೈಕ್ಷಣಿಕ ರಂಗದಲ್ಲಿ ಒಂದು ದೊಡ್ಡ ಕೊಡುಗೆಯನ್ನು ಅವರು ಕೊಟ್ಟರು. ಅದರ ಜೊತೆಗೆ, ವೈದ್ಯಕೀಯ ರಂಗದಲ್ಲಿ ತಾಂತ್ರಿಕ ಶಿಕ್ಷಣಕ್ಕೂ ಒತ್ತು ಕೊಡುವಂಥ ಕೆಲಸ ಮಾಡಿದ್ದರು. Engineering College ಪ್ರಾರಂಭ ಮಾಡಿದ್ದು ಇರಬಹುದು, Medical

College ಪ್ರಾರಂಭ ಮಾಡಿದ್ದು ಇರಬಹುದು, ಅದೇ ರೀತಿ ಹಲವರು ತಾಂತ್ರಿಕ ಶಿಕ್ಷಣ ಪಡೆದುಕೊಳ್ಳುವಂಥದ್ದು ಏನಿದೆ, ಇವತ್ತಿನ ವ್ಯವಸ್ಥೆಯಲ್ಲಿ ಅದಕ್ಕೆ ಹೆಚ್ಚು ಮಹತ್ವ ಬರುತ್ತಿದೆ. ಆ ತಾಂತ್ರಿಕ ಶಿಕ್ಷಣಕ್ಕೂ ಹೆಚ್ಚು ಒತ್ತು ಕೊಡುವ ಕೆಲಸವನ್ನು ಅವರು ಮಾಡಿದ್ದಾರೆ. ಅದರಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲತೆಯನ್ನು ಅವರು ಮಾಡಿಕೊಟ್ಟಿದ್ದಾರೆ. ಅವರು ಶಿಕ್ಷಣ ಸಂಸ್ಥೆಗಳನ್ನು ನಗರ ಪ್ರದೇಶಕ್ಕಿಂತ ಹೆಚ್ಚಾಗಿ ಗ್ರಾಮೀಣ ಭಾಗದಲ್ಲಿ ಸ್ಥಾಪನೆ ಮಾಡಿದ್ದರು. ಇದು ಬಹಳ ಮುಖ್ಯವಾಗಿರುವಂಥದ್ದು. ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದೆಂದರೆ ವ್ಯಾಪಾರೀಕರಣ ಮಾಡುವಂಥದ್ದು ಎನ್ನುವ ಮನೋಭಾವನೆ ಬಹಳಷ್ಟು ಜನರಲ್ಲಿದೆ. ಆದರೆ, ನಗರದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದಕ್ಕೂ, ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಹೀಗಾಗಿ, ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು, ಆ ಭಾಗಕ್ಕೆ ಹೆಚ್ಚು ಒತ್ತು ಕೊಟ್ಟು, ಅಲ್ಲಿಯ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲೆಂದು ಮಾಡಿದ್ದಾರೆ. ಶಿಕ್ಷಣ ರಂಗದಲ್ಲಿ ಅವರು ಬಹಳ ಸೇವೆಯನ್ನು ಮಾಡಿದ್ದರು. ಇದರ ಜೊತೆಗೆ, ಅವರು ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಹಿಂದೆ ಹಲವಾರು ಸಭೆ–ಸಮಾರಂಭಗಳಲ್ಲಿ, ಅವರ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದಂಥ ಸಂದರ್ಭದಲ್ಲಿ, ನಾನು ಗ್ರಾಮೀಣಾಭಿವೃದ್ಧಿ ಖಾತೆಯ ಸಚಿವನಾಗಿದ್ದ ಸಂದರ್ಭದಲ್ಲಿ ಆದಿಚುಂಚನಗಿರಿ ಮತ್ತು ಇನ್ನಿತರ ನೂರಾರು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕೆಂದು ಅವರು ಬಹಳ ಒತ್ತಾಯ ಮಾಡಿದ ಸಂದರ್ಭದಲ್ಲಿ, ತಕ್ಷಣವೇ ನಮ್ಮ ಸರ್ಕಾರ ಕ್ರಮ ಕೈಗೊಂಡು ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡಿ, ಇವತ್ತು ಅದನ್ನು ಚಾಲನೆ ಮಾಡುವಂಥ ಹಂತಕ್ಕೆ ತೆಗೆದುಕೊಂಡು ಬಂದಿದ್ದೇವೆ. ಗ್ರಾಮೀಣ ಭಾಗದಲ್ಲಿರುವ ನೂರಾರು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆನ್ನುವ ಪೂಜ್ಯ ಶ್ರೀಗಳ ಆಸೆ ಏನಿತ್ತು ಆ ವಿಷಯಕ್ಕೆ ಸಂಬಂಧಪಟ್ಟಂತೆ ಆ ಯೋಜನೆಗೆ ನಾವು ಚಾಲನೆಯನ್ನು ಕೊಟ್ಟಿದ್ದೇವೆ. ಅದರ ಜೊತೆಗೆ, ಬೆಂಗಳೂರು ಗ್ರಾಮಾಂತರ ಇರಬಹುದು,

ಕೋಲಾರ ಜಿಲ್ಲೆ ಇರಬಹುದು, ಚಿಕ್ಕಬಳ್ಳಾಪುರ ಜಿಲ್ಲೆ ಇರಬಹುದು ಮತ್ತು ತುಮಕೂರು ಜಿಲ್ಲೆಗೆ ಸೀಮಿತವಾಗಿ ಕುಡಿಯುವ ನೀರಿನ ಯೋಜನೆ ಇದೆ, ಅದರಲ್ಲೂ ಮುಖ್ಯವಾಗಿ ಎತ್ತಿನಹೊಳೆ ಯೋಜನೆ ಮತ್ತು ಡಾ: ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿ ಕೊಟ್ಟಿರುವ ವರದಿ ಏನಿದೆ, ಆ ವರದಿಯನ್ವಯ ನೀರಾವರಿ ಯೋಜನೆಗೆ ಮತ್ತು ಕುಡಿಯುವ ನೀರಿನ ಯೋಜನೆಗೆ ಚಾಲನೆ ಕೊಡುವಂಥದ್ದೇನಿದೆ, ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿಯೇ ಎತ್ತಿನಹೊಳೆ ಯೋಜನೆಗೆ ಚಾಲನೆ ಕೊಡುವಂಥ ಕೆಲಸ ಆಗಬೇಕೆನ್ನುವುದು ಶ್ರೀಗಳ ಆಸೆ ಏನಿತ್ತು, ಅದಕ್ಕೆ ಒತ್ತು ಕೊಡುವ ಕೆಲಸವನ್ನೂ ಸಹ ಸರ್ಕಾರ ಮಾಡಿದೆ, ಅದಕ್ಕೆ ಸ್ಪಂದನೆ ಮಾಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ, ಪರಿಸರಕ್ಕೂ ಹೆಚ್ಚು ಒತ್ತು ಕೊಡುವಂಥ ಕೆಲಸವನ್ನು ಪೂಜ್ಯ ಸ್ವಾಮೀಜಿಯವರು ಮಾಡಿದ್ದಾರೆ. ಅದರಲ್ಲೂ ಕೋಟ್ಯಾಂತರ ಸಸಿಗಳನ್ನು ನೆಡುವುದರ ಮುಖಾಂತರ ಪರಿಸರಕ್ಕೂ ಒತ್ತು ಕೊಡುವಂಥ ಕೆಲಸ ಮಾಡಿದ್ದಾರೆ. ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನೂ ಅವರು ಮಾಡಿದ್ದರು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗಾಗಿ, ಪೂಜ್ಯ ಸ್ವಾಮೀಜಿಯವರು ಅವರ ಭಕ್ತರಿಗೆ ಅಥವಾ ಯಾರೇ ಹೋದವರಿಗೂ ಪಕ್ಷಾತೀತವಾಗಿ ಆತ್ಮೀಯತೆಯಿಂದ, ಪ್ರೀತಿ–ವಿಶ್ವಾಸದಿಂದ ಮಾರ್ಗದರ್ಶನ ಮಾಡತಕ್ಕಂಥ ಗುಣ ಏನಿತ್ತು, ಬಹುಶಃ ಆ ಗುಣ ಅವರಲ್ಲಿ ಬಹಳಷ್ಟು ಆಕರ್ಷಣೆ ಹೊಂದುವುದಕ್ಕೆ ಕಾರಣವಾಯಿತೆಂದು ನಾವು ನೆನಪು ಮಾಡಿಕೊಳ್ಳಬೇಕು. ಹೀಗಾಗಿ, ಲಕ್ಷಾಂತರ ಜನ ಅವರ ಅಗಲಿಕೆಯಿಂದ ಬಹಳ ದುಃಖದಲ್ಲಿದ್ದಾರೆ. ಅವರ ಮಾರ್ಗದರ್ಶನ, ಸಮಾಜ ಸೇವೆ ನಮ್ಮೆಲ್ಲರಿಗೂ ಮಾರ್ಗದರ್ಶನ ಆಗಲಿ ಎಂದು ಹೇಳುತ್ತಾ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ.

ಇನ್ನು, ಕೆ.ಬಿ. ಮಲ್ಲಪ್ಪನವರು ಹಿಂದೆ 1980ರ ದಶಕದಲ್ಲಿ ಕೃಷಿ ಮಾರುಕಟ್ಟೆ ಸಹಕಾರ ಸಚಿವರಾಗಿ ಕೆಲಸ ಮಾಡಿದ್ದರು. ಅರಕಲಗೂಡು ಶಾಸಕರಾಗಿ ಅವರು ಕೆಲಸವನ್ನು ಮಾಡಿದ್ದರು. ಯಾವಾಗಲೂ

ಜನಪರವಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಹಾಲು ಮಹಾಮಂಡಲದ ಅಧ್ಯಕ್ಷರಾಗಿ, ರಾಜ್ಯ ಹೈನುಗಾರಿಕೆ ಅಭಿವೃದ್ಧಿಗೂ ಅವರು ಅವರ ಕೊಡುಗೆಯನ್ನು ಕೊಟ್ಟಿದ್ದರು. ಅಂಥವರ ಅಗಲಿಕೆಯೂ ಸಹ ಸಮಾಜಕ್ಕೆ ದೊಡ್ಡದಾದ ನಷ್ಟವೆನ್ನುವ ಮಾತು ಹೇಳುತ್ತೇನೆ.

ಇನ್ನು, ಬಿ.ಇ. ರಾಮಯ್ಯನವರು ಇತ್ತೀಚೆಗೆ ನಿಧನರಾದರು. ಸಿರಗುಪ್ಪ ವಿಧಾನಸಭಾ ಕ್ಷೇತ್ರದಿಂದ ಅವರು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಸಮಾಜದ ಬಗ್ಗೆ ಹೆಚ್ಚು ಕಳಕಳಿ ಇದ್ದವರು. ಅವರು ದೇವರಾಜ ಅರಸುರವರ ಸಚಿವ ಸಂಪುಟದಲ್ಲಿ ಸಚಿವರಾಗಿ ಉತ್ತಮವಾದಂಥ ಕೆಲಸ ಮಾಡಿದ್ದು, ಅವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೂ ನಾನು ಶಾಂತಿ ಕೋರುತ್ತಿದ್ದೇನೆ.

ಇನ್ನು, ಸಿ.ಎಂ.ಎಸ್. ಶಾಸ್ತ್ರಿಯವರು ಚಿಕ್ಕಮಗಳೂರಿನಲ್ಲಿ ಜನಿಸಿದ್ದು, 1942 ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅವರು 1967ರಲ್ಲಿ ಚಿಕ್ಕಮಗಳೂರು ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದಂಥವರು. ಅವರು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿದಂಥವರು. ಹೀಗಾಗಿ, ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವಂಥ ಕೆಲಸ ಮಾಡಿದ್ದರು.

ಇನ್ನು, ಪೂಜ್ಯರಾದ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ನಿನ್ನೆ ತಾನೆ ನಮ್ಮನ್ನಗಲಿದರು. ನಿನ್ನೆ ಬೆಳಗ್ಗೆ ನಾರಾಯಣ ಹೃದಯಾಲಯದಲ್ಲಿ ಅವರು ಮೃತಪಟ್ಟ ಸಂದರ್ಭದಲ್ಲಿ ನಾನು ಬೆಳಗ್ಗೆ ಅವರ ದರ್ಶನಕ್ಕೆ ಹೋಗಿದ್ದೆ. ಪೂಜ್ಯರಾದ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ಲಿಂಗಾಯತ ಪಂಚಮಸಾಲಿ ಪೀಠದ ಪಟ್ಟಾಧ್ಯಕ್ಷರಾಗಿದ್ದರು. ಸಮಾಜದ ಒಗ್ಗಟ್ಟಿಗೆ, ಸಂಘಟನೆಗೆ ಹೆಚ್ಚು ಕೆಲಸ ಮಾಡಿದಂಥವರು. ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಅಭ್ಯುದಯಕ್ಕೆ ಭದ್ರ ಬುನಾದಿಯನ್ನು ಹಾಕಿದಂಥ ಶ್ರೀಗಳವರು ಇವತ್ತು ಹಲವಾರು ಸಮಾಜಮುಖಿ ಚಟುವಟಿಕೆಗಳಿಂದ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು. ಬಹುಭಾಷಾ ವಿಶಾರದರಾಗಿದ್ದ ಶ್ರೀಗಳವರು ತಮ್ಮ ವಿದ್ವತ್ ಹಾಗೂ ತಮ್ಮ

ವಾಕ್ಪಟುತ್ವದಿಂದ ಬಹಳಷ್ಟು ಭಕ್ತರ ಆಕರ್ಷಣೆಯ ಕೇಂದ್ರವಾಗಿದ್ದರು. ಕನ್ನಡ, ಸಂಸ್ಕೃತ, ಹಿಂದಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಜೊತೆಗೆ ಪೂಜ್ಯರು ತತ್ವ ಶಾಸ್ತ್ರ ವಿಷಯದಲ್ಲಿ ಪಿ.ಹೆಚ್ಡಿ. ಪದವಿಯನ್ನು ಪಡೆದಿದ್ದರು. 2008ರಲ್ಲಿ ವೀರಶೈವ ಪಂಚಮಸಾಲಿ ಪೀಠದ ಪ್ರಥಮ ಅಧ್ಯಕ್ಷರಾದಂಥ ಅವರು ಸಂಸ್ಥೆಯ ಸರ್ವಾಂಗೀಣ ವಿಕಾಸ ಪ್ರಕ್ರಿಯೆಗೆ ಅಪಾರವಾದ ಸೇವೆ ಮಾಡಿದ್ದರು. ಅದಕ್ಕೊಂದು ಅಡಿಪಾಯವನ್ನೂ ಹಾಕಿದ್ದರು. ಜನರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ಮತ್ತು ಅದರ ಜೊತೆಗೆ ಪಂಚಮಸಾಲಿ ಸಮುದಾಯವನ್ನೊಳಗೊಂಡಂತೆ ಎಲ್ಲರ ಸಬಲೀಕರಣಕ್ಕೆ ಹೆಚ್ಚು ಒತ್ತು ಕೊಟ್ಟು ಸಮಾಜದ ಹಲವಾರು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಧಾರ್ಮಿಕ ಬದಲಾವಣೆ, ಧಾರ್ಮಿಕ ಜಾಗೃತಿ ಮೂಡುವಂಥ ಕೆಲಸವನ್ನು ಪೂಜ್ಯರು ಮಾಡಿದ್ದರು. ಪೂಜ್ಯರಾದ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ನಮ್ಮನ್ನಗಲಿದ್ದು ಲಕ್ಷಾಂತರ ಭಕ್ತರಿಗೆ ಬಹಳಷ್ಟು ಆಘಾತವಾಗಿದೆ. ಈ ಎಲ್ಲ ಮೃತ ಮಹನೀಯರ ಆತ್ಮಕ್ಕೂ ನಾನು ಶ್ರದ್ಧಾಂಜಲಿ ಕೋರುತ್ತೇನೆ. ಈ ಎಲ್ಲ ಮೃತ ಮಹನೀಯರ ಅಗಲಿಕೆಯಿಂದ ದುಃಖದಲ್ಲಿರುವ ಕುಟುಂಬ ವರ್ಗದವರಿಗೆ ಮತ್ತು ಲಕ್ಷಾಂತರ ಭಕ್ತರಿಗೆ ಧೈರ್ಯ ಕೊಡುವಂಥದ್ದಾಗಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿ, ತಮ್ಮ ಸಂತಾಪ ಸೂಚನೆಗೆ ನಾನು ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದ ನಂತರ ಈ ಮನೆಯ ಸದಸ್ಯರುಗಳು, ಪೂಜ್ಯ ಸ್ವಾಮೀಜಿಯವರುಗಳಾದ ಬಾಲ ಗಂಗಾಧರನಾಥ ಸ್ವಾಮೀಜಿ, ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ನಮ್ಮನ್ನೆಲ್ಲ ಅಗಲಿದ್ದಾರೆ. ಅವರ ಬಗ್ಗೆ ಸಂತಾಪ ವ್ಯಕ್ತಪಡಿಸಲಿಕ್ಕೆ, ಅವರಿಗೆ ಗೌರವ ಸಲ್ಲಿಸಲಿಕ್ಕೋಸ್ಕರವಾಗಿ ಈ ನಿರ್ಣಯವನ್ನು ತಾವು ತಂದಿದ್ದೀರಿ. ಈ ನಿರ್ಣಯವನ್ನು ನಾನು ಬೆಂಬಲಿಸಿ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲಿಗೆ, ಬಿ.ಇ. ರಾಮಯ್ಯನವರು ಮೂರು ಬಾರಿ

ಈ ಸದನದ ಸದಸ್ಯರಾಗಿದ್ದಂಥವರು. ಅವರು ಬಿ.ಎ. ಪದವೀಧರರಾಗಿದ್ದರು. ಸಿರಗುಪ್ಪ ತಾಲ್ಲೂಕಿನಲ್ಲಿ ಜನಿಸಿದವರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರು ಮತ್ತು ಸಮಾಜಸೇವಕರಾಗಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸಂಸ್ಥಾಪನೆ ಮಾಡಿ ಹಳ್ಳಿಗಾಡಿನ ಮಕ್ಕಳಿಗೆ ಶಿಕ್ಷಣ ಕೊಡಲಿಕ್ಕೆ ಅಪಾರವಾದ ಶ್ರಮವನ್ನು ವಹಿಸಿದ್ದರು. ಅವರು ಸ್ವಲ್ಪ ಕಾಲ ಯೋಜನಾ ಖಾತೆಯ ಸಚಿವರಾಗಿಯೂ ಸಹ ಕೆಲಸ ಮಾಡಿದ್ದರು. ಅವರು ಇತ್ತೀಚೆಗೆ ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಕೆ.ಬಿ. ಮಲ್ಲಪ್ಪನವರು ನಮ್ಮ ಜೊತೆ ಶಾಸಕರಾಗಿದ್ದರು. 1978, 1983, 1985ರಲ್ಲಿ ಜನತಾಪಾರ್ಟಿಯ MLA ಆಗಿದ್ದರು, ಜನತಾದಳದಿಂದ MLA ಆಗಿದ್ದರು. ನನ್ನ ಜೊತೆಯಲ್ಲಿ ಅವರು ಮಾರುಕಟ್ಟೆ ಸಚಿವರಾಗಿದ್ದರು, co-operative Minister ಆಗಿದ್ದರು. ಅವರು ಬಹಳ ಸಜ್ಜನಿಕೆ ಮತ್ತು ಸರಳ ವ್ಯಕ್ತಿತ್ವದವರಾಗಿದ್ದರು. ಅವರು ಅತ್ಯಂತ ಸರಳ ವ್ಯಕ್ತಿತ್ವ ಹೊಂದಿದ್ದರು. ಬಹಳ ಮೃದುಭಾಷಿ, ಒಬ್ಬ ಪ್ರಾಮಾಣಿಕ ವ್ಯಕ್ತಿ ಕೂಡ ಆಗಿದ್ದರು. ರಾಜಕಾರಣದಲ್ಲಿ ಇವತ್ತು ಪ್ರಾಮಾಣಿಕರು ಕಡಿಮೆಯಾಗುತ್ತಾ ಇದ್ದಾರೆ. ಇವರೆಲ್ಲ ಪ್ರಾಮಾಣಿಕರಾಗಿದ್ದಂಥ ವ್ಯಕ್ತಿಗಳು. ಮಲ್ಲಪ್ಪನವರನ್ನು ನಾನು ಸ್ವತಃ ಹತ್ತಿರದಿಂದ ನೋಡಿದಂಥವನು. ಅವರು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ಸಿ.ಎಂ.ಎಸ್. ಶಾಸ್ತ್ರಿಯವರು 1967ರಲ್ಲಿ ಶಾಸಕರಾಗಿದ್ದರು. ನಮಗೆ ಅವರ ಪರಿಚಯ ಇರಲಿಲ್ಲ. ಆದರೂ ಕೂಡ ಅವರೊಬ್ಬ ಕೈಗಾರಿಕೋದ್ಯಮಿಯಾಗಿದ್ದರು, ಕೃಷಿಕರಾಗಿದ್ದರು, ಸಾಮಾಜಿಕ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿದ್ದರು, ಶಿಕ್ಷಣ ಸಂಸ್ಥೆಗಳನ್ನು ತೆರೆದಿದ್ದರು, ಅವರು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೂ ಕೂಡ ಚಿರಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ಡಾಕ್ಟರ್ ಬಾಲಗಂಗಾಧರನಾಥ ಸ್ವಾಮೀಜಿಯವರು ಆದಿಚುಂಚನಗಿರಿ ಮಠದ ಧರ್ಮಾಧಿಕಾರಿಯಾಗಿದ್ದರು. ಅವರು ಇತ್ತೀಚೆಗೆ ಅಸ್ವಸ್ಥರಾಗಿದ್ದರು. Kidney failure ಆಗಿ ಚಿಕಿತ್ಸೆಗೊಳಗಾಗಿದ್ದರು. ಆದರೆ, ಅವರು ಆದಿಚುಂಚನಗಿರಿಯ ಪೀಠಾಧಿಕಾರಿಯಾಗಿ 36–38 ವರ್ಷ ಇದ್ದರೆಂದು ತೋರುತ್ತದೆ. ಆ ಅವಧಿಯಲ್ಲಿ ಅವರು ಮಾಡಿರುವ ಸಾಧನೆ ಇದೆಯಲ್ಲಾ, ಅದು ನಮ್ಮ ಯೋಚನೆಗೂ ನಿಲುಕದ ಸಾಧನೆ. ಅವರು ಅಪಾರವಾದ ಸಾಧನೆ ಮಾಡಿದ್ದಾರೆ. ಶಿಕ್ಷಣ, ಆರೋಗ್ಯ, ಧಾರ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ಅಪಾರವಾದ ಸಾಧನೆ ಮಾಡಿದ್ದಾರೆ. ಜೊತೆಗೆ ಪರಿಸರ ಪ್ರೇಮಿ ಕೂಡ ಆಗಿದ್ದವರು. ಜೊತೆಗೆ ನೂರಾರು ಶಾಲೆಗಳನ್ನು ಹಳ್ಳಿಗಾಡಿನಲ್ಲಿ ತೆರೆದಿದ್ದರು. ಕಾಲೇಜುಗಳನ್ನೂ ತೆರೆದಿದ್ದರು. ಎರಡು Medical College ಗಳನ್ನು ತೆರೆದಿದ್ದರು ಮತ್ತು Engineering College ಅನ್ನು ತೆರೆದಿದ್ದರು. ವಿಶೇಷವಾಗಿ, ಹಳ್ಳಿಗಾಡಿನ ಮಕ್ಕಳಿಗೆ ಊಟ, ವಸತಿ ಕೊಟ್ಟಿದ್ದರು. ಪುಕ್ಕಟೆಯಾಗಿ ಸಾವಿರಾರು ಮಕ್ಕಳಿಗೆ ವಿದ್ಯೆ ಕೊಟ್ಟಿದ್ದಾರೆ ಮತ್ತು ಅಂಧ ಮತ್ತು ನಿರ್ಗತಿಕ ಮಕ್ಕಳಿಗೆ ಶಿಕ್ಷಣ ಕೊಡುವುದು ಮತ್ತು ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿಕೊಡುವುದು ಇದೆಯಲ್ಲಾ, ಅದೆಲ್ಲವನ್ನೂ ಮಾಡಿದ್ದಾರೆ. ಬಹುಶಃ ಅವರ ಸಾಧನೆಯನ್ನು ಊಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ನಾನು 1974ರಲ್ಲಿ ವಕೀಲನಾಗಿದ್ದೆ. ಆಗ ನಾನು ಅವರ ಮಠಕ್ಕೆ ಹೋಗಿದ್ದೆ. ಅವರು ಆಗತಾನೆ ಪೀಠಾಧಿಕಾರಿಯಾಗಿದ್ದರು. ಅವರ ಹತ್ತಿರ ಒಳ್ಳೆಯ ಕಾರು ಕೂಡ ಇರಲಿಲ್ಲ. ಒಂದು ಹಳೆಯ ಕಾರು ಇತ್ತು. ಆ ಪರಿಸ್ಥಿತಿಯಿಂದ ಆ ಮಠವನ್ನು ಅಷ್ಟೊಂದು ಎತ್ತರಕ್ಕೆ, ಅಷ್ಟೊಂದು ವಿಶಾಲವಾಗಿ ಬೆಳೆಸಿದ ಕೀರ್ತಿ ಬಾಲಗಂಗಾಧರನಾಥ ಸ್ವಾಮೀಜಿಯವರಿಗೆ ಸೇರುತ್ತದೆ. ಇವರನ್ನು ನಾವು ನೆನೆಯಬೇಕಾಗುತ್ತದೆ. ಸಮಾಜಕ್ಕೆ ಅವರ ಕೊಡುಗೆ ಅಪಾರವಾದದ್ದು. ಅವರು ದೊಡ್ಡ ಕೊಡುಗೆ ಕೊಟ್ಟಿದ್ದಾರೆ. ಧಾರ್ಮಿಕ ಕ್ಷೇತ್ರದಲ್ಲಿದ್ದ ಅಂಥ ಒಬ್ಬ ಮಹಾನ್ ವ್ಯಕ್ತಿ ನಮ್ಮನ್ನಗಲಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದವರು ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟಿದ್ದರು. ಅನೇಕ ಡಾಕ್ಟರೇಟ್ ಪದವಿಗಳು ಬಂದಿದ್ದವು.

ಅನೇಕ ಇತರ ಪ್ರಶಸ್ತಿಗಳು - ಬಂದಿದ್ದವು. ಅವರ ಸೇವೆಯನ್ನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ. ದೂರದೃಷ್ಟಿ ಇದ್ದ, ಸಮಾಜಮುಖಿಯಾಗಿದ್ದ ಸಮಾಜದ ಬಗ್ಗೆ ಅಪಾರ ಕಾಳಜಿ ಇಟ್ಟುಕೊಂಡಿದ್ದ ಹಳ್ಳಿಗಾಡಿನ ಜನರೂ ಕೂಡ ಮುಖ್ಯವಾಹಿನಿಗೆ ಬರಬೇಕೆಂಬ ಕಳಕಳಿ ಇಟ್ಟುಕೊಂಡಿದ್ದ ಸ್ವಾಮೀಜಿಯವರು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ಸದಾ ಇರಲಿ ಎಂದು ಆಶಿಸಿ, ಅವರು ಮಾಡಿದ ಸೇವೆ ನಮಗೆಲ್ಲರಿಗೂ ವಿಶೇಷವಾಗಿ ಯುವಪೀಳಿಗೆಗೆ ಮಾರ್ಗದರ್ಶನವಾಗಲಿ, ಸ್ಫೂರ್ತಿ ಕೊಡುವುದು ಆಗಲಿ ಎಂದು ಈ ಸಂದರ್ಭದಲ್ಲಿ ಆಶಿಸಿ, ಅವರಿಗೆ ಗೌರವ ಸಲ್ಲಿಸುವ ಕೆಲಸ ಮಾಡುತ್ತಿದ್ದೇನೆ.

ಇನ್ನು ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು 1983ರಲ್ಲಿ ಹರಿಹರದಲ್ಲಿರುವ ಪಂಚಮಸಾಲಿ ಪೀಠದ ಪೀಠಾಧ್ಯಕ್ಷರಾಗಿದ್ದರು. ಇವರು ಬಹಳಷ್ಟು ಓದಿಕೊಂಡಿದ್ದರು. ಸಂಸ್ಕೃತ, ವೇದ ಅಧ್ಯಯನ ಮಾಡಿದ್ದರು. ಸಂಸ್ಕೃತ ಮತ್ತು ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಅಪಾರವಾದ ಜ್ಞಾನ ಪಡೆದವರಾಗಿದ್ದರು. ಒಂದು ರೀತಿಯಲ್ಲಿ ಧಾರ್ಮಿಕ ಗುರುಗಳಾದರೂ ಕೂಡ ಬುದ್ಧಿಜೀವಿಯಾಗಿದ್ದರು ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅವರು ಆಧ್ಯಾತ್ಮ ರಂಗದಲ್ಲಿ ಅಪಾರವಾದ ಕೆಲಸ ಮಾಡಿದ್ದರು. ಅವರು 4ನೇ ತಾರೀಖು ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇದೆಲ್ಲ ಮಾತನಾಡುವಾಗ ಈ ರೀತಿ ಆದರೆ ಹೇಗೆ?

ಅಧ್ಯಕ್ಷರು:- ದಯವಿಟ್ಟು ಮಾನ್ಯ ಸದಸ್ಯರು ಅಲ್ಲಲ್ಲಿ ಮಾತನಾಡಿಕೊಳ್ಳಬೇಡಿ. ಸಂತಾಪ ಸೂಚನೆಯ ಗಾಂಭೀರ್ಯತೆಯನ್ನು ಅರ್ಥಮಾಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ:- ಸದನದಲ್ಲಿ ಸ್ವಲ್ಪ ಗಾಂಭೀರ್ಯತೆ ಇರಲಿ. ಅಗಲಿದ ಮಹನೀಯರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಪ್ರಾರ್ಥಿಸಿ, ಮತ್ತೊಮ್ಮೆ ಇವರಿಗೆಲ್ಲ ಗೌರವ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಅಧ್ಯಕ್ಷರೆ, ಪರಮಪೂಜ್ಯ ಡಾಕ್ಟರ್ ಬಾಲಗಂಗಾಧರನಾಥ ಸ್ವಾಮೀಜಿಯವರು 18ನೇ ಜನವರಿ 1945ರಂದು ರಾಮನಗರ ಜಿಲ್ಲೆಯ ಬಾನಂದೂರು ಗ್ರಾಮದಲ್ಲಿ ಜನಿಸಿದ್ದು, ಬಿ.ಎಸ್ಸಿ, ಪದವೀಧರರಾಗಿದ್ದರು. 19ನೇ ವಯಸ್ಸಿನಲ್ಲಿಯೇ ಧಾರ್ಮಿಕ ಚಿಂತನೆ ಹೊಂದಿ ಧರ್ಮಶಾಸ್ತ್ರ ಮತ್ತು ವೇದಾಧ್ಯಯನವನ್ನು ಪೂರೈಸಿರುತ್ತಾರೆ. 1974ರಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿ ಸನ್ಯಾಸ ದೀಕ್ಷೆಯನ್ನು ಪಡೆದುಕೊಂಡಿರುತ್ತಾರೆ. ಶ್ರೀಗಳು ನೂರಾರು ಶಾಲಾ–ಕಾಲೇಜುಗಳನ್ನು, ಮಹಾವಿದ್ಯಾಲಯಗಳನ್ನು ಮತ್ತು ಧರ್ಮಶಾಲೆಗಳನ್ನು ಸ್ಥಾಪಿಸುವುದರ ಮೂಲಕ ರಾಜ್ಯದ ಅಕ್ಷರ ದಾಸೋಹಿಯಾಗಿದ್ದರಲ್ಲದೆ ಪರಿಸರ ಪ್ರೇಮಿಯೂ ಆಗಿದ್ದರು ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಅಪಾರ ಕೊಡುಗೆ ಸಲ್ಲಿಸಿದ್ದರು. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಶೈಕ್ಷಣಿಕ, ಸಾಮಾಜಿಕ, ಆರೋಗ್ಯ ಹಾಗೂ ಧಾರ್ಮಿಕ ಕ್ಷೇತ್ರಗಳಿಗೆ ಸಲ್ಲಿಸಿರುವ ಕೊಡುಗೆ ಅನನ್ಯ. ಶ್ರೀಗಳು ಅತ್ಯುನ್ನತ ಪದ್ಮಭೂಷಣ ಪ್ರಶಸ್ತಿಯನ್ನು ಒಳಗೊಂಡಂತೆ ಹಲವಾರು ಪ್ರಶಸ್ತಿ ಪಡೆದಿದ್ದರು. ಪರಮಪೂಜ್ಯ ಸ್ವಾಮೀಜಿಯವರು ಎಲ್ಲಾ ಸಮಾಜದ ವಿಶ್ವಾಸ ಗಳಿಸಿದ್ದ ಅವರು ದಿನಾಂಕ 13.1.2013 ರಂದು ನಿಧನ ಹೊಂದಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರುತ್ತೇನೆ.

ಇನ್ನು, ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು 29ನೇ ಸೆಪ್ಟೆಂಬರ್ 1938 ರಂದು ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕು ಮನಗೂಳಿ ಗ್ರಾಮದಲ್ಲಿ ಜನಿಸಿದ್ದು, ಬಸವೇಶ್ವರ ಕಾಲೇಜಿನಲ್ಲಿ ಪದವಿ, ಕಾಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ, ಪ್ರಯಾಗ ವಿಶ್ವವಿದ್ಯಾಲಯದಿಂದ ಹಿಂದಿ ಸಾಹಿತ್ಯ ವಿಚಾರದಲ್ಲಿ ಮತ್ತು ವಾರಣಾಸಿ ಸಂಸ್ಕೃತ ಮತ್ತು ತತ್ವಶಾಸ್ತ್ರದಲ್ಲಿ ಪದವಿ ಪಡೆಯುವುದರ ಜೊತೆಗೆ ಅವರು ಡಾಕ್ಟರೇಟ್ ಪದವಿಯನ್ನು ಸಹ ಪಡೆದುಕೊಂಡಿರುತ್ತಾರೆ. 1983ರಲ್ಲಿ ಹರಿಹರದಲ್ಲಿರುವ ಪಂಚಮಸಾಲಿ ಪೀಠದ ಪೀಠಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ. ಮತ್ತು ಮಹಾಸ್ವಾಮೀಜಿಯವರು ಸೌಮ್ಯ ಸ್ವಭಾವದ

ಸಮಾಜಮುಖಿ ಸಂತರಾಗಿದ್ದರಲ್ಲದೆ ಆಧ್ಯಾತ್ಮ ರಂಗದಲ್ಲಿ ಮತ್ತು ಸಂಸ್ಕೃತ ವಿಷಯದಲ್ಲಿ ಧೀಮಂತ ಯುಗಪುರುಷರಾಗಿದ್ದರು. ಅವರು ದಿನಾಂಕ 04.02.2013ರಂದು ನಿಧನ ಹೊಂದಿರುತ್ತಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರುತ್ತೇನೆ.

ಇನ್ನು, ಮಾಜಿ ಸಚಿವರಾದ ಬಿ.ಇ. ರಾಮಯ್ಯನವರು 1ನೇ ಜೂನ್ 1932ರಂದು ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಬಾಗೇವಾಡಿಯಲ್ಲಿ ಜನಿಸಿದ್ದು, ಬಿ.ಎ. ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರು ಮತ್ತು ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. ದಿವಂಗತರು 1957, 1972 ಹಾಗೂ 1978 ರಲ್ಲಿ ಅನುಕ್ರಮವಾಗಿ 2, 5 ಮತ್ತು 6ನೇ ವಿಧಾನಸಭೆಗೆ ಸಿರಗುಪ್ಪ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಅಲ್ಲದೆ 1979ರಲ್ಲಿ ಯೋಜನಾ ಖಾತೆಯ ಸಚಿವರಾಗಿಯೂ ಸಹ ಕಾರ್ಯ ನಿರ್ವಹಿಸಿರುತ್ತಾರೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ಇನ್ನು ಕೆ.ಬಿ. ಮಲ್ಲಪ್ಪನವರು ನನ್ನ ಜಿಲ್ಲೆಯವರು. ಅವರು ಪ್ರಾಮಾಣಿಕ ರಾಜಕಾರಣಿ. ಮಲ್ಲಪ್ಪನವರು 1931ರಲ್ಲಿ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕು ಕಡೆವಿನಹೊಸಹಳ್ಳಿಯಲ್ಲಿ ಜನಿಸಿದ್ದರು. ಕಾನೂನು ಪದವೀಧರರಾಗಿದ್ದರು ಮತ್ತು ವೃತ್ತಿಯಲ್ಲಿ ಕೃಷಿಕರಾಗಿದ್ದರು. ದಿವಂಗತರು ಅರಕಲಗೂಡು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಮತ್ತು 1978, 1983, 1985ರಲ್ಲಿ ವಿಧಾನಸಭೆ ಸದಸ್ಯರಾಗಿದ್ದರು. 1987 ರಿಂದ 1988 ರವರೆಗೆ ಕೃಷಿ ಮಾರುಕಟ್ಟೆ ಸಚಿವರಾಗಿದ್ದು, ದಿ. 15.04.1989 ರಿಂದ 21.04.1989 ರವರೆಗೆ ಸಹಕಾರ ಸಚಿವರಾಗಿದ್ದು ಒಬ್ಬ ಸಜ್ಜನ ರಾಜಕಾರಣಿಯಾಗಿದ್ದು ನಮ್ಮ ಜಿಲ್ಲೆಯಲ್ಲಿ ಒಬ್ಬ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ಇವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೋರುತ್ತೇನೆ. ಮತ್ತೊಬ್ಬರಾದ ಸಿ.ಎಂ.ಎಸ್. ಶಾಸ್ತ್ರಿಯವರು ದಿನಾಂಕ 17.08.1921 ರಂದು ಚಿಕ್ಕಮಗಳೂರಿನಲ್ಲಿ ಜನಿಸಿ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿರುತ್ತಾರೆ. ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರಲ್ಲದೆ, 1942ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ಇವರು 1967ರಲ್ಲಿ

4ನೇ ವಿಧಾನ ಸಭೆಗೆ ಚಿಕ್ಕಮಗಳೂರು ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಸನ್ಮಾನ್ಯ ಸಭಾಧ್ಯಕ್ಷರು ಇಂದು ತಂದಿರುವ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ಮೃತರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಆ ದೇವರಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಅಶೋಕ (ಉಪ ಮುಖ್ಯಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಇಲಾಖೆ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯದ ಮಾಜಿ ಸಚಿವರಾದಂಥ ರಾಮಯ್ಯನವರು, ಮಲ್ಲಪ್ಪನವರು ಹಾಗೂ ಶಾಸಕರಾಗಿದ್ದಂಥ ಸಿ.ಎಂ.ಎಸ್. ಶಾಸ್ತ್ರಿಯವರು ಹಾಗೂ ಆದಿಚುಂಚನಗಿರಿ ಮಠದ ಯತಿಗಳಾಗಿದ್ದ ಡಾ: ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ಇವರೆಲ್ಲರೂ ನಮ್ಮನ್ನು ಅಗಲಿದ್ದಾರೆ. ವಿಶೇಷವಾಗಿ ಆದಿಚುಂಚನಗಿರಿ ಕ್ಷೇತ್ರ ಕರ್ನಾಟಕದ, ದೇಶದ ಚರಿತ್ರೆಯಲ್ಲಿ ಖಾಯಂ ಆಗಿ ಉಳಿಯುವಂಥ ಹಲವಾರು ಒಳ್ಳೆಯ ಸತ್ಕಾರ್ಯಗಳನ್ನು ಮಾಡುವ ಮುಖಾಂತರ ಸುಮಾರು ಎರಡು ಸಾವಿರ ಇತಿಹಾಸ ಇರುವಂಥ ಒಂದು ಮಠದಲ್ಲಿ ಅದರ ಪೀಠಾಧ್ಯಕ್ಷರಾಗಿ 39 ವರ್ಷಗಳ ಕಾಲ ಜನಸೇವೆಯನ್ನು ಮಾಡಿ 500 ವರ್ಷ ಆ ಮಠ ಇದ್ದರೂ ಕೂಡ 39 ವರ್ಷದಲ್ಲಿ ಇಷ್ಟೊಂದು ಪ್ರಸಿದ್ಧಿಯನ್ನು ಪಡೆಯುವಂಥದ್ದು, ವಿಶೇಷವಾಗಿ ವಿದ್ಯಾದಾನ ಮಾಡತಕ್ಕಂಥದ್ದು, ಪ್ರತಿನಿತ್ಯ 20 ಸಾವಿರ ಮಕ್ಕಳಿಗೆ ಅನ್ನ ಕೊಡತಕ್ಕಂಥದ್ದು, ಮರ ನೆಡತಕ್ಕಂಥದ್ದು, ಪರಿಸರ ಕಾಪಾಡತಕ್ಕಂಥದ್ದು, ಈ ತರಹದ ಹಲವಾರು ವಿಚಾರಗಳಲ್ಲಿ ಆದಿಚುಂಚನಗಿರಿ ಮಠ ಇವತ್ತು ಬಹಳ ಶ್ರೇಷ್ಠ ಕೆಲಸ ಮಾಡಿದೆ. ಪರಮಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿಯವರು ಮುಂಚೂಣಿಯಲ್ಲಿ ಈ ಕೆಲಸವನ್ನು ಮಾಡಿದ್ದಾರೆ. ಸುಮಾರು 400 ವಿದ್ಯಾಸಂಸ್ಥೆಗಳನ್ನು ಕಟ್ಟುವ ಮೂಲಕ ಇಡೀ ದೇಶವ್ಯಾಪ್ತಿ, ಕರ್ನಾಟಕ ಒಂದೇ ಅಲ್ಲ, ತಮಿಳುನಾಡಿನಲ್ಲಿಯೂ ಸಹ ಮಠ, ವಿದ್ಯಾಕೇಂದ್ರಗಳನ್ನು ಮಾಡಿದ್ದಾರೆ. ಕಾಶಿ, ದೆಹಲಿಗಳಲ್ಲಿಯೂ ಸಹ ವಿದ್ಯಾಶಾಲೆಗಳನ್ನು ಮಾಡಿದ್ದಾರೆ. ವಿಶೇಷವಾಗಿ, ಮಠ ಎಂದರೆ ಎಲ್ಲಿ ಕನ್ನಡದವರು ಜಾಸ್ತಿ ಇದ್ದಾರೆ, ಕನ್ನಡದ ಮಕ್ಕಳಿಗೆ ಅವಕಾಶ

ಕೊಡತಕ್ಕಂಥದ್ದು, ಯಾವುದೇ ಜಾತಿ ಧರ್ಮ ಈ ಬೇದಭಾವ ಇಟ್ಟುಕೊಳ್ಳದೇ ಎಲ್ಲರಿಗೂ ವಿದ್ಯೆ ಸಿಗಬೇಕೆನ್ನುವ ಉದ್ದೇಶ ಇಟ್ಟುಕೊಂಡು ಈ ಮಠ ಕಟ್ಟಿ ಚರಿತ್ರೆಯಲ್ಲಿ ದಾಖಲಾಗುವಂಥ ಒಳ್ಳೆಯ ಕಾರ್ಯ ಮಾಡಿದ್ದಾರೆ. ನಾವು ಸರ್ಕಾರದವರು ವಿದ್ಯೆಗೆ ಸಂಬಂಧಪಟ್ಟಂತೆ ಏನು ಮಾಡಬೇಕಾಗಿತ್ತು, ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಇವರು ವಿದ್ಯಾ ರಂಗದಲ್ಲಿ ಕೆಲಸ ಮಾಡಿದ್ದಾರೆ. ಪರಮಪೂಜ್ಯ ಸ್ವಾಮೀಜಿಯವರು ಸರ್ಕಾರದ ಹಲವಾರು ವಿಚಾರಗಳಲ್ಲಿ ಕಾವೇರಿ ಇರಬಹುದು, ಎತ್ತಿನ ಹೊಳೆ ವಿಚಾರದಲ್ಲಿ ಇರಬಹುದು. ಈ ಎಲ್ಲಾ ಸಂದರ್ಭದಲ್ಲಿಯೂ ಸಹ ಸ್ವಾಮೀಜಿಯವರು ಸರ್ಕಾರದ ಪರವಾಗಿ ನಿಂತು, ಜನ ಸಾಮಾನ್ಯರ ಪರವಾಗಿ ನಿಂತು, ಈ ಕೆಲಸ ಆಗಬೇಕೆಂದು ಮುಂಚೂಣಿಯಲ್ಲಿ ನಿಂತು, ನಮ್ಮ ಜೊತೆ ಸಾಮಾನ್ಯರ ಜೊತೆ ಕೆಲಸ ಮಾಡಿದ್ದಾರೆ. ಅವರ ಅಗಲಿಕೆ ನಿಜಕ್ಕೂ ಇಡೀ ಕರ್ನಾಟಕಕ್ಕೆ ನೋವಿನ ಸಂಗತಿಯಾಗಿದೆ. ದಿವಂಗತ ಪರಮಪೂಜ್ಯ ಸ್ವಾಮೀಜಿಯವರು ನಿರ್ಮಲಾನಂಥ ಸ್ವಾಮೀಜಿಯವರನ್ನು ತಮ್ಮ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿದ್ದಾರೆ. ಇವರು ಕೂಡ M.Tech ಮಾಡಿ research student ಆಗಿರುವಂಥವರು, ಮುಂದೆ ಈ ಮಠ ನಡೆಸಿಕೊಂಡು ಹೋಗಲಿಕ್ಕೆ, ಈ ಮಠ ಜನಪರವಾಗಲಿಕ್ಕೆ, ಆದಿಚುಂಚನಗಿರಿಯ ಹಿಂದಿನ ಸ್ವಾಮೀಜಿಯವರು ತಮ್ಮ ವಿಲ್‌ನಲ್ಲಿ ಈ ಮಠ ಎಂದಿದ್ದರೂ ವಿದ್ಯಾ ದಾನದ ಮಠ ಆಗಬೇಕು, ಬಡವರಿಗೆ ಅನ್ನ ಕೊಡುವ ಮಠ ಆಗಬೇಕು ಎಂದು ಬರೆದಿದ್ದರು. ಆ ದಿಕ್ಕಿನಲ್ಲಿ ಈಗಿನ ನಿರ್ಮಲಾನಂಥ ಸ್ವಾಮೀಜಿಯವರು ನಡೆಸಿಕೊಂಡು ಹೋಗುತ್ತಾರೆ ಎನ್ನುವ ವಿಶ್ವಾಸ ನಮ್ಮೆಲ್ಲರಿಗೂ ಇದೆ. ಇವರ ಅಗಲಿಕೆಯ ಭಾರದ ದುಃಖವನ್ನು ಭರಿಸತಕ್ಕಂಥ ಶಕ್ತಿ ರಾಜ್ಯದ ಜನತೆಗೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅದೇ ರೀತಿಯಾಗಿ ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ಕೂಡ ನಿಧನರಾಗಿದ್ದಾರೆ. ಇವರು ಕೂಡ ಕಾಲೇಜಿನಲ್ಲಿ ಪಡೆದಿರುವ ಉನ್ನತ ಶಿಕ್ಷಣ ಇರಬಹುದು, ಸಂಸ್ಕೃತ ವಿಶ್ವ ವಿದ್ಯಾನಿಲಯದಲ್ಲಿ ಪಡೆದಂಥ ಪದವಿ ಇರಬಹುದು. ಜನ ಸಾಮಾನ್ಯರ ಜೊತೆ ಬೆರೆತು ಕೆಲಸ ಮಾಡತಕ್ಕಂಥದ್ದು

ಇರಬಹುದು, ಅವರಿಗೆ ಗೌರವ ಡಾಕ್ಟರೇಟ್ ಪದವಿ ಪಡೆದಿರುವುದು, ಇವೆಲ್ಲಾ ಅವರು ಸಮಾಜ ಮುಖಿಯಾಗಿ ಕೆಲಸ ಮಾಡಿರುವಂಥದ್ದು ನಮ್ಮ ಕಣ್ಣ ಮುಂದೆ ಇದೆ. ಈ ತರಹದ ಹಲವಾರು ಗಣ್ಯರು ನಮ್ಮ ಮಧ್ಯೆ ಇಲ್ಲ. ಅವರೆಲ್ಲರಿಗೂ ತಾವು ಸಂತಾಪ ಸೂಚನೆ ಕಳುಹಿಸಿ ಕೊಟ್ಟಿರುವುದಕ್ಕೆ ನಮ್ಮ ಸಹಮತ ನೀಡಿ ಅವರ ದುಃಖವನ್ನು ಭರಿಸತಕ್ಕಂಥ ಶಕ್ತಿ ಅವರ ಕುಟುಂಬ ವರ್ಗದವರಿಗೆ ಮತ್ತು ರಾಜ್ಯದ ಜನತೆಗೆ ಆ ಭಗವಂತನು ನೀಡಲಿ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ):- ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಸಂಪೂರ್ಣವಾದ ಬೆಂಬಲ ವ್ಯಕ್ತಪಡಿಸುತ್ತಿದ್ದೇನೆ. ಮಾಜಿ ಶಾಸಕರಾಗಿದ್ದಂಥ ರಾಮಯ್ಯನವರು ನಮ್ಮ ಜೊತೆಯಲ್ಲಿ ಶಾಸಕರಾಗಿದ್ದಂಥವರು. ಬಹುಶಃ ಅತ್ಯಂತ ಒಬ್ಬ ಮೇದಾವಿ ಶಾಸಕ ಎಂದು ಹೇಳಿದರೆ ತಪ್ಪಾಗಲಾರದು. ಸಹಕಾರಿ ಕ್ಷೇತ್ರದಲ್ಲಿ ಅತ್ಯಂತ ಅನುಭವ ಇರತಕ್ಕಂಥ ಶಾಸಕರಾಗಿದ್ದರು. ಇವರ ಮಾತು ನಡೆ ನುಡಿಯಲ್ಲಿಯೂ ಕೂಡ ಅತ್ಯಂತ ಗಂಭೀರವಾದ ರೀತಿಯಲ್ಲಿ ಅವರ ನಡವಳಿಕೆಗಳು ಇರುತ್ತಿತ್ತು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಾಗಿ ಕೆ.ಎಂ. ಮಲ್ಲಪ್ಪನವರು, ಸಿ.ಎಂ.ಎಸ್. ಶಾಸ್ತ್ರಿಯವರು ಕೂಡ ನಿಧನರಾಗಿದ್ದಾರೆ. ಇನ್ನು ಡಾ: ಬಾಲಗಂಗಾಧರನಾಥ ಸ್ವಾಮೀಜಿಗಳ ಬಗ್ಗೆ ನಾವೆಷ್ಟೇ ಮಾತನಾಡಿದರೂ ಕೂಡ ಅದು ಕಡಿಮೆ ಎಂದೆನಿಸುತ್ತದೆ. ಅವರು ಮಾಡಿರುವ ಅಗಾಧವಾದ ಸೇವೆಯ ಬಗ್ಗೆ ಅದನ್ನು ವರ್ಣಿಸುವುದಕ್ಕೆ ನನ್ನಲ್ಲಿ ಪದಗಳಿಲ್ಲ. ಬಹುಶಃ ಯಾರಾದರೂ ಕೂಡ ಆದಿಚುಂಚನಗಿರಿ ಕ್ಷೇತ್ರ 1974ರ ಪೂರ್ವದಲ್ಲಿ ಯಾವ ರೀತಿಯಾಗಿತ್ತು ಎಂದು ಕಲ್ಪನೆ ಮಾಡಿಕೊಂಡರೆ, ಅಥವಾ ಬೇರೆಯವರಿಂದ ಕೇಳಿ ತಿಳಿದುಕೊಂಡರೆ ಅರ್ಥವಾಗುತ್ತದೆ. ಈಗ ಅಲ್ಲಿಗೆ ಹೋಗಿ ನೋಡಿದರೆ ಅಲ್ಲಿ ಆಗಿರತಕ್ಕಂಥ ಅಸಾಧಾರಣ ಕೆಲಸ ನೋಡಿದಾಗ ಆ ಸೇವೆ ನೋಡಿದಾಗ ಬಹುಶಃ ಎಂಥವರಿಗೂ ಕೂಡ ಇದು ಒಬ್ಬ ವ್ಯಕ್ತಿಯಾಗಿ ಮಾಡಿದರೋ ಅಥವಾ

ಒಂದು ಶಕ್ತಿಯಾಗಿ ಮಾಡಿದರೊ ಎನ್ನುವ ಭಾವನೆ ಬರುವ ರೀತಿಯಲ್ಲಿ ಎಲ್ಲರಿಗೂ ಕೂಡ ಅನುಮಾನ ಬರುತ್ತದೆ. ಅವರು ಒಂದು ವ್ಯಕ್ತಿಯಾಗಿರಲಿಲ್ಲ ಅವರು ಒಂದು ಶಕ್ತಿಯಾಗಿದ್ದರು ಎಂದರೆ ತಪ್ಪಾಗಲಾರದು. ಅವರು ಅಷ್ಟಕ್ಕೆ ಬಿಡಲಿಲ್ಲ, ಅವರು ಕೈ ಇಡದಿರುವ ಕ್ಷೇತ್ರ ಯಾವುದು ಇದೆ? ಪರಿಸರ ಕ್ಷೇತ್ರವನ್ನೂ ಅವರು ಬಿಡಲಿಲ್ಲ. ಒಂದು ವರ್ಷಕ್ಕೆ 5 ಕೋಟಿ ಸಸಿಗಳನ್ನು ನೆಡುವ ಆಂದೋಲನ ಮಾಡಿ ಸರ್ಕಾರದ ಜೊತೆಗೂಡಿ ಹಳ್ಳಿಹಳ್ಳಿಗೂ ಹೋಗಿ ಮರಗಿಡಗಳನ್ನು ನೆಡಿಸತಕ್ಕಂಥ ಕೆಲಸ ಮಾಡಿದರು. ಇವತ್ತು ಯಾರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಿಂತಲೂ ಅದ್ವಿತೀಯ ರೀತಿಯಲ್ಲಿ ಈ ಪ್ರಕೃತಿಯ ಉಳಿವಿಗಾಗಿ ಮಾಡಿರತಕ್ಕಂಥ ಸಾಧನೆ ಬಹುಶಃ ಈ ದೇಶದಲ್ಲಿ ಯಾರಾದರೂ ಈ ತರಹ ಸ್ವಾಮಿಗಳಿದ್ದಾರೆಂದರೆ ಬಹುಶಃ ಇವರೊಬ್ಬರು ಎಂದು ನನಗೆ ಅನ್ನಿಸುತ್ತದೆ. ಇದರ ಜೊತೆಗೆ ಕಣ್ಣು ಕಾಣದೇ ಕುರುಡರಾಗಿತಕ್ಕಂಥವರ ಬಗ್ಗೆ ಅನುಕಂಪ ಇಟ್ಟುಕೊಂಡು ಅವರಿಗೊಂದು ಶಾಲೆ ಮಾಡಿ ಅವರನ್ನು ಸಾಕುವ ಕೆಲಸ ಮಾಡಿದರು. ಈ ರೀತಿಯಾಗಿ ಅತ್ಯಂತ ಮಾನವೀಯತೆ ಇದ್ದಂಥ ಸ್ವಾಮೀಜಿ ಅದೇ ರೀತಿಯಾಗಿ ಈ ಸಮಾಜದಲ್ಲಿರುವ ಎಲ್ಲಾ ಶೋಷಿತ ವರ್ಗದವರು ಯಾರ್ಯಾರಿದ್ದಾರೆ ಅವರ ನೆರವಿಗೆ ಹೋಗತಕ್ಕಂಥ ಪರಿಪಾಟವನ್ನು ಇಟ್ಟುಕೊಂಡು ಈ ರೀತಿಯಾಗಿ ರಾಜ್ಯಾದ್ಯಂತ, ರಾಷ್ಟ್ರಾದ್ಯಂತ, ಶಿಕ್ಷಣ ಕೇಂದ್ರಗಳನ್ನು ಮಾಡಿ ಬಡ ಮಕ್ಕಳಿಗೆ, ವಿಶೇಷವಾಗಿ ಕನ್ನಡದ ಮಕ್ಕಳಿಗೆ ಪ್ರೋತ್ಸಾಹ ಮಾಡುವಂಥ ಸಾಧನೆ ಮಾಡಿದ್ದಕ್ಕೆ ಭಾರತ ಸರ್ಕಾರ ಕೂಡ ಪದ್ಮಭೂಷಣ ಪ್ರಶಸ್ತಿ ಕೊಟ್ಟು ಗೌರವಿಸಿದಂಥ ಸ್ವಾಮೀಜಿ ಅಗಲಿದ್ದಾರೆ. ನಾನೂ ಕೂಡ ಸ್ವಾಮೀಜಿಯವರ ಅಂತಿಮ ಯಾತ್ರೆಯ ದಿವಸ ಅಲ್ಲಿದ್ದೆ. ಅಲ್ಲಿ ಬಂದಂಥ ಜನಸ್ತೋಮ ನೋಡಿದಾಗ, ಯಾರಾದರೂ ಒಬ್ಬ ವ್ಯಕ್ತಿಯಾಗಲಿ ಶಕ್ತಿಯಾಗಲಿ ಅವರು ಮಾಡಿದಂಥ ಸಾಧನೆ ಏನೆಂದು ಅಳತೆಗೋಲು ಮಾಡಬೇಕಾದಾಗ ಅವರು ಸತ್ತಾಗ ನೋಡಬೇಕಂತೆ. ಆನಗಳ ಭಾವನೆ, ಜನಗಳ ಕಣ್ಣೀರು, ಜನ ಬರುತ್ತಿರುವುದು, ಜನ ಪಡುತ್ತಿರುವ ಕಾತರಗಳನ್ನು ನೋಡಿದಾಗ ಅದು

ಅರ್ಥವಾಗುತ್ತದೆ. ಮತ್ತೊಮ್ಮೆ ಅಂಥ ಸ್ವಾಮೀಜಿಯವರು ಹುಟ್ಟಿ ಬರುತ್ತಾರೆ ಎನ್ನುವ ವಿಶ್ವಾಸವಿಲ್ಲ. ಆದರೆ, ಆ ಮಠದ ಸತ್ಸಂಪ್ರದಾಯದ ರೀತಿಯಲ್ಲಿ ಮುಂದೆ ನಡೆಸುವ ಕಾರ್ಯ ಆಚರಣೆಯಲ್ಲಿಯೂ ಕೂಡ ಒಬ್ಬ ಒಳ್ಳೆಯ ಅತ್ಯಂತ ವಿದ್ಯಾವಂತ ಉತ್ತರಾಧಿಕಾರಿಯಾದ ನಿರ್ಮಲಾನಂಧನಾಥ ಸ್ವಾಮೀಜಿಯವರನ್ನು ನೇಮಿಸಿ ಆ ಮಠವನ್ನು ಬೆಳೆಸುವ ಕೆಲಸ ಮಾಡುತ್ತಿದ್ದಾರೆ. ನಾವು ಏಕೆ ಈ ಬಗ್ಗೆ ಹೆಚ್ಚು ಹೇಳಬೇಕಾಗುತ್ತದೆ ಎಂದರೆ, ಆ ಭಾಗದ ಗ್ರಾಮೀಣ ಪ್ರದೇಶದ ಸಾವಿರಾರು ಮಕ್ಕಳಿಗೆ ಅನ್ನ ಹಾಕುವುದರಿಂದ ಹಿಡಿದು ಶಿಕ್ಷಣ ಕೊಡತಕ್ಕಂಥದ್ದು, ಎಲ್ಲಾ ರೀತಿಯಾದ ಹಸಿವನ್ನು, ಜ್ಞಾನದ ಹಸಿವಿನ ಜೊತೆಗೆ ಹೊಟ್ಟೆಯ ಹಸಿವನ್ನು ಕೂಡ ನಿವಾರಣೆ ಮಾಡುವಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿ ಅದನ್ನು ನಡೆಸಿಕೊಂಡು ಹೋಗುತ್ತಿರುವ ಕೆಲಸ ಮಾಡುತ್ತಿರುವುದು ನಿಜವಾಗಲೂ ಕೂಡ ಮೆಚ್ಚತಕ್ಕಂಥದ್ದು. ಅಂಥ ಸ್ವಾಮೀಜಿಗಳು ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ನನಗೆ ವಯಸ್ಸು ಇದೆ ಆರೋಗ್ಯ ಇಲ್ಲವೆಂಬ ಮಾತನ್ನು ನಾವು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಅವರು ಹೇಳಿದ್ದರು. ಆದರೆ, ಅವರು ಇಷ್ಟು ಬೇಗ ಕಾಲಗರ್ಭದಲ್ಲಿ ಸೇರುತ್ತಾರೆಂದು ನಾವ್ಯಾರು ಅಂದುಕೊಂಡಿರಲಿಲ್ಲ. ಶ್ರೀಯುತರು ಇವತ್ತು ಪ್ರಕೃತಿಯಲ್ಲಿ ಸೇರಿಹೋಗಿದ್ದಾರೆ. ಬಹುಶಃ ಅವರು ಮಾಡಿರುವಂಥ ಅವಿಸ್ಮರಣೀಯವಾದ ಸೇವೆಯನ್ನು ಕರ್ನಾಟಕದ ಜನತೆಯೆಲ್ಲರೂ ನೆನಪಿಡಬೇಕಾಗುತ್ತದೆ. ಹಾಗೆಯೇ ಅವರು ಮಾಡಿರುವ ಕಾರ್ಯಕ್ರಮಗಳಿಗೆ ನಾವೆಲ್ಲರೂ ಸಹ ಪೂರಕವಾಗಿ ಅಂದರೆ, ಸರ್ಕಾರ ಇರಬಹುದು, ಜನಪ್ರತಿನಿಧಿಗಳಿರಬಹುದು, ಇವತ್ತಿನ ದಿವಸ ಯಾರೇ ಇದ್ದರೂ ಸಹ ಅದಕ್ಕೆ ಸಹಕಾರ ಮತ್ತು ಪ್ರೋತ್ಸಾಹವನ್ನು ಕೊಟ್ಟುಕೊಂಡು ಹೋಗಬೇಕೆಂಬ ದೃಷ್ಟಿಯಿಂದ ಈ ಒಂದು ಮಾತನ್ನು ಹೇಳುತ್ತಿದ್ದೇನೆ. ಅದೇ ರೀತಿಯಾಗಿ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಗಳು ಇವತ್ತು ನಿಧನರಾಗಿದ್ದಾರೆ. ಶ್ರೀಯುತರು "ದಿ ಕಾನ್ಸೆಪ್ಟ್ ಆಫ್ ಅಲ್ಟಿಮೇಟ್ ರಿಯಾಲಿಟಿ ಇನ್ ವೀರಶೈವಿಸಂ ಅಂಡ್ ಅದ್ವೈತ ವೇದಾಂತ – ಎ

ಕಂಪ್ಲೀಟ್ ಸ್ಟಡಿ" ಎಂಬ ಪುಸ್ತಕವನ್ನು ಬರೆದಂಥ ಒಬ್ಬ ದೊಡ್ಡ ಜ್ಞಾನಿಯಾಗಿದ್ದರು. ಶ್ರೀಯುತರನ್ನು ನಾವು ಕಳೆದುಕೊಂಡಿದ್ದೇವೆ. ಬಹುಶಃ ನಾನು ಅವರಿಗೆ ಸ್ವಲ್ಪ ಹತ್ತಿರದವನಾಗಿದ್ದರಿಂದ ಅವರು ಮಾಡಿರತಕ್ಕಂಥ ಅಸಾಧಾರಣವಾದಂಥ ಸೇವೆ ಏನು ಎಂಬುದು ನನಗೂ ಸಹ ಗೊತ್ತಿದೆ ಎಂಬ ಮಾತನ್ನು ಹೇಳುತ್ತಾ, ಬಹುಶಃ ಇವರೆಲ್ಲರ ಅಗಲಿಕೆಯಿಂದ ಈ ಸಮಾಜ ತಬ್ಬಲಿಯಾಗಿದೆ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ):– ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ನಮ್ಮೆಲ್ಲರನ್ನು ಅಗಲಿರುವ ಶ್ರೀಯುತ ಬಿ.ಇ. ರಾಮಯ್ಯನವರು, ಶ್ರೀಯುತ ಕೆ.ಬಿ. ಮಲ್ಲಪ್ಪನವರು ಮತ್ತು ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀಯುತ ಸಿ.ಎಂ.ಎಸ್. ಶಾಸ್ತ್ರಿಯವರು ಹಾಗೂ ವಿಶೇಷವಾಗಿ ಜಗದ್ಗುರುಗಳಾಗಿದ್ದಂಥ ಆದಿಚುಂಚನಗಿರಿ ಮಠದ ಯತಿಗಳಾಗಿದ್ದಂಥ ಡಾ: ಬಾಲಗಂಗಾಧರನಾಥ ಸ್ವಾಮೀಜಿಯವರು ಹಾಗೆಯೇ ನಿನ್ನೆ ದಿವಸ ತೀರಿಕೊಂಡಂಥ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರ ಸಂತಾಪ ಸೂಚನೆಯಲ್ಲಿ ಭಾಗವಹಿಸಿ ಮಾತನಾಡಿದಂಥ ಹಿರಿಯ ಸದಸ್ಯರು ಎಲ್ಲರ ವಿಚಾರಗಳನ್ನು ಈಗಾಗಲೇ ಹೇಳಿದ್ದಾರೆ. ವಿಶೇಷವಾಗಿ ಡಾ: ಬಾಲಗಂಗಾಧರನಾಥ ಸ್ವಾಮೀಜಿಯವರ ವಿಚಾರದ ಬಗ್ಗೆ ನಾನು ಮಾತನಾಡುತ್ತೇನೆ. ಪರಮಪೂಜ್ಯರು ಆದಿಚುಂಚನಗಿರಿ ಕ್ಷೇತ್ರದ ಪೀಠಾಧ್ಯಕ್ಷರಾಗಿ ಕೇವಲ 39 ವರ್ಷಗಳಲ್ಲಿ ಅವರು ಕೊಟ್ಟಂಥ ಕಾರ್ಯಕ್ರಮಗಳು ಮತ್ತು ಬಡವರು, ದೀನದಲಿತರ ಏಳಿಗೆಗೆ ಶ್ರೀಯುತರು ಶ್ರಮಿಸಿದಂಥ ಅನೇಕ ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಶ್ರೀಯುತರು ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಹೇಳಿ ಅದನ್ನು ಕೈಗೆತ್ತಿಕೊಳ್ಳುತ್ತಿದ್ದರು. ವಿಶೇಷವಾಗಿ ನನ್ನ ಗ್ರಾಮಾಂತರ ಪ್ರದೇಶದ ಜನರು ಆರೋಗ್ಯವಂತರಾಗಿರಬೇಕೆಂದು ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ದೊಡ್ಡ ಆಸ್ಪತ್ರೆಗಳನ್ನು ಮತ್ತು ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂಬ ಚಿಂತನೆ

ಇದ್ದಂಥ ಸಂದರ್ಭದಲ್ಲಿ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಕ್ರಾಸ್‌ನ ಒಂದು ಗ್ರಾಮಾಂತರ ಪ್ರದೇಶದಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಿಸಿ, ಗ್ರಾಮಾಂತರ ಪ್ರದೇಶದ ಜನರಿಗೆ ಆರೋಗ್ಯವನ್ನು ಕೊಡಬೇಕೆಂಬ ನಿಟ್ಟಿನಲ್ಲಿ ಏನೇ ಕಷ್ಟಗಳು ಬಂದರೂ ಸಹ ಆಸ್ಪತ್ರೆಯನ್ನು ನಡೆಸಿದಂಥ ಒಂದು ಉದಾಹರಣೆ ನಮ್ಮ ಕಣ್ಮುಂದೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಶಿಬಿರಗಳನ್ನು ನಮ್ಮಂಥ ಜನಪ್ರತಿನಿಧಿಗಳ ಕಡೆಯಿಂದ ಆಯೋಜನೆ ಮಾಡಿಸಿ ಇಡೀ ಆಸ್ಪತ್ರೆಯ ಡಾಕ್ಟರ್‌ಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು ಅಲ್ಲಿ ಗುರುತಿಸುವಂಥ ಕಾಯಿಲೆಗಳಿಗೆ ಉತ್ತಮವಾದಂಥ ಚಿಕಿತ್ಸೆಯನ್ನು ಕೊಡತಕ್ಕಂಥ ನಿಟ್ಟಿನಲ್ಲಿ ಸ್ವಾಮೀಜಿಯವರು ಅನೇಕ ಈ ರೀತಿಯಾದ ಕಾರ್ಯಕ್ರಮಗಳನ್ನು ಮಾಡಿರುವಂಥದ್ದನ್ನು ನಾವು ಮಠದ ಭಕ್ತರಾಗಿ ನೋಡಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು ಸರ್ಕಾರಿ ಶಾಲೆಗಳನ್ನು ಮುಚ್ಚತಕ್ಕಂಥ ವಿಚಾರದಲ್ಲಿ ಅವರು ಕಾರ್ಯೋನ್ಮುಖರಾಗಿದ್ದರೂ ಸಹ ಗ್ರಾಮಾಂತರ ಪ್ರದೇಶದಲ್ಲಿ ಉತ್ತಮವಾದಂಥ ಶಿಕ್ಷಣವನ್ನು ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಕೊಡಬೇಕೆಂದು ಹೇಳಿ ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿರುವಂಥವುಗಳನ್ನು ನಾವು ನೋಡಿದ್ದೇವೆ. ಹಿರಿಯ ಸದಸ್ಯರು ಈಗಾಗಲೇ ಹೇಳಿದಂತೆ ಇವತ್ತಿನ ದಿವಸ ನಾವೆಲ್ಲರೂ ಪ್ರಕೃತಿ ವಿಕೋಪದಲ್ಲಿ ನಶಿಸಿಹೋಗುತ್ತಿದ್ದೇವೆ. ಇಂಥ ಒಂದು ಸಂದರ್ಭದಲ್ಲಿ ಇಡೀ ರಾಜ್ಯದ 5 ಕೋಟಿ ಜನರ ತಲೆಗೊಂದು ಸಸಿಯಂತೆ 5 ಕೋಟಿ ಸಸಿಗಳನ್ನು ನೆಡಿಸಿ ಈ ಪ್ರಕೃತಿಯನ್ನು ಉಳಿಸುವಂಥದ್ದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಬಹಳ ದೊಡ್ಡ ಮಟ್ಟದಲ್ಲಿ ಆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿದಂಥದ್ದನ್ನು ನಾವೆಲ್ಲರೂ ನೋಡಿದ್ದೇವೆ. ಪರಮ ಪೂಜ್ಯರು ಬಹಳ ನಿರೀಕ್ಷೇಯನ್ನು ಇಟ್ಟುಕೊಂಡು ಈ ಸಮಾಜದ ತುಳಿತಕ್ಕೆ ಒಳಗಾದಂಥ ಅಂದರೆ, ವಿಶೇಷವಾಗಿ ಕೃಷಿಕರನ್ನು ಒಂದು ಸಮಾಜ ಮುಖ್ಯವಾಹಿನಿಗೆ ತರಬೇಕೆಂಬ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಮತ್ತು ತರಬೇತಿಗಳನ್ನು ಕೊಟ್ಟಿರತಕ್ಕಂಥದ್ದು ನಮ್ಮ ಕಣ್ಮುಂದೆ ಇದೆ. ಇವತ್ತಿನ ದಿವಸ ಕಾವೇರಿ

ಬೇಸಿನ್‌ನ ರೈತರು ಸಂಕಷ್ಟದಲ್ಲಿ ನಿಲುಕಿದಂಥ ಸಂದರ್ಭದಲ್ಲಿ ಅವರೇ ಬೀದಿಗಿಳಿದು ಹೋರಾಟವನ್ನು ರೂಪಿಸಿ ನ್ಯಾಯವನ್ನು ದೊರಕಿಸಿಕೊಡುವಂಥ ಕೆಲಸವನ್ನು ಮಾಡಿರುವಂಥದ್ದನ್ನು ನಮ್ಮ ರೈತರು ಯಾವತ್ತೂ ಕೂಡ ಮರೆಯುವುದಕ್ಕೆ ಸಾಧ್ಯವಿಲ್ಲ. ಮಹಾನ್ ಸ್ವಾಮೀಜಿಯವರು ಇವತ್ತಿನ ದಿವಸ ಅನೇಕ ಕಾಯಿಲೆಗಳಿಗೆ ತುತ್ತಾದರೂ ಸಹ ಯಾವುದನ್ನೂ ಲೆಕ್ಕಸದೇ ಅವರ ಜೀವನದ ಕೊನೆಯ ಕ್ಷಣದವರೆಗೆ ಸಮಾಜದ ಅನೇಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಬೆಳಿಗ್ಗೆ ಅವರು ಡಯಾಲಿಸಿಸ್ ಮಾಡಿಸಿಕೊಂಡು ಮಧ್ಯಾಹ್ನದ ಮೇಲೆ ಎಲ್ಲ ಕ್ಷೇತ್ರಗಳಿಗೆ ಹೋಗಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕೆಲಸ ಮಾಡುತ್ತಿದ್ದಂಥವುಗಳನ್ನು ನಾವೆಲ್ಲರೂ ನೋಡಿದದೇವೆ. ಇಂಥ ಒಂದು ಮಹಾನ್ ಶಕ್ತಿಯಾಗಿ ಮತ್ತು ನಮ್ಮೆಲ್ಲರಿಗೂ ದೈವಸ್ವರೂಪರಾಗಿ ಆಶೀರ್ವಾದ ಮಾಡುತ್ತಿದ್ದಂಥ ಸ್ವಾಮೀಜಿಯವರನ್ನು ಈ ನಾಡು, ಈ ರಾಷ್ಟ್ರ ಕಳೆದುಕೊಂಡು ಒಂದು ರೀತಿಯಲ್ಲಿ ನಿಜವಾಗಿಯೂ ಕೂಡ ವೇದನೆಯನ್ನು ಪಟ್ಟಂಥದ್ದನ್ನು ಅವರ ಸಂಸ್ಕಾರ ನಡೆಯುವಂಥ ಸಂದರ್ಭದಲ್ಲಿ ನಾವೆಲ್ಲರೂ ಕಣ್ಣಿನಿಂದ ನೋಡಿದ್ದೇವೆ. ಇಂಥ ಸ್ವಾಮೀಜಿ ಮತ್ತೊಮ್ಮೆ ಹುಟ್ಟಿ ಬರಬೇಕು. ಅವರ ದೂರ ದೃಷ್ಟಿಯ ಫಲ ಒಬ್ಬ ಮಹಾನ್ ವಿದ್ಯಾವಂತರಾಗಿರುವ ನಿರ್ಮಲಾನಂದ ಸ್ವಾಮೀಜಿಯವರನ್ನು ಗುರುತಿಸಿ ಮಠದ ಪೀಠಾಧ್ಯಕ್ಷರನ್ನಾಗಿ ಮಾಡಿ, ನಾನು ನಡೆಸಿಕೊಂಡು ಬಂದಿರುವಂಥ ಎಲ್ಲ ಕಾರ್ಯಕ್ರಮಗಳನ್ನು ಎಲ್ಲ ಭಕ್ತರ ಸಹಕಾರ ಪಡೆದುಕೊಂಡು ಅನುಷ್ಠಾನ ಮಾಡಬೇಕೆಂದು ಸೂಚನೆಯನ್ನು ಸಹ ಕೊಟ್ಟು ಹೋಗಿದ್ದಾರೆ. ಇಂಥ ಸ್ವಾಮೀಜಿಯವರನ್ನು ಕಳೆದುಕೊಂಡು ನಾವೆಲ್ಲರೂ ದುಃಖ ಸಾಗರದಲ್ಲಿದ್ದೇವೆ. ಡಾ:ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರನ್ನು ನಾವೆಲ್ಲರೂ ನಿನ್ನೆ ದಿವಸ ಕಳೆದುಕೊಂಡಿದ್ದೇವೆ. ನಾವು ಸಹ ಆ ಮಠಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಡಾ: ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರು ಮಾಡುತ್ತಿದ್ದಂಥ ಜನಪರವಾದ ಕಾರ್ಯಕ್ರಮಗಳನ್ನು ನೋಡಿದ್ದೇವೆ. ಇವತ್ತಿನ ದಿವಸ ಇಂಥ ಒಬ್ಬ ಸ್ವಾಮೀಜಿಯನ್ನು ನಾವು

ಕಳೆದುಕೊಂಡಿರುವಂಥದ್ದು ನಮ್ಮೆಲ್ಲರಿಗೂ ದುಃಖ ತಂದಿದೆ ಎಂದು ಹೇಳುತ್ತಾ, ಈ ಸಂತಾಪ ಸೂಚನೆಯಲ್ಲಿ ಭಾಗವಹಿಸಿ ಈ ಮಹಾನ್ ಗಣ್ಯರನ್ನು ಕುರಿತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ನಿಮಗೆ ನನ್ನ ಅಭಿನಂದನೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ):– ಮಾನ್ಯ ಅಧ್ಯಕ್ಷರೆ, ಮಾನವ ಜನ್ಮ ದುರ್ಲಭ. ಮಾನವ ಎಂಬ ಮೂರು ಅಕ್ಷರಕ್ಕೆ ಅರ್ಥವಿದೆ. ಅದೇನೆಂದರೆ, ಮಾತು, ನಡತೆ, ವಜ್ರದಂತೆ ಇರಬೇಕು. ಹಸನಾದ ಭೂಮಿಯಲ್ಲಿ ಒಳ್ಳೆಯ ಬೀಜವನ್ನು ಬಿತ್ತಿ ಉತ್ಕೃಷ್ಟವಾಗಿ ಬೆಳೆಯಾಗುವಂತೆ ಪರಿಶುದ್ಧ ನಡತೆ, ಪರಿಶುದ್ಧ ವಾತಾವರಣದಲ್ಲಿ ಹುಟ್ಟಿರುವಂಥ ಮಹಾಸ್ವಾಮಿಗಳು ಇವತ್ತು ನಮ್ಮೆಲ್ಲರನ್ನು ಅಗಲಿದ್ದಾರೆ. ಒಂದು ಸರ್ಕಾರ ಮಾಡುವಂಥ ಕೆಲಸವನ್ನು ಅವರು ಮಾಡಿದ್ದಾರೆ. ಸರ್ಕಾರಕ್ಕೂ ಆ ಶಕ್ತಿ ಇಲ್ಲವೇನೋ? ಶ್ರೀಯುತರು 480 ಸಂಸ್ಥೆಗಳನ್ನು ಕಟ್ಟಿದ್ದಾರೆ. ಭಾರತ ದೇಶ ಅಲ್ಲದೆ ಹೊರದೇಶದಲ್ಲಿಯೂ ಕೂಡ ತಮ್ಮದೇ ಆದಂಥ ಪ್ರಖ್ಯಾತಿಯನ್ನು ಗಳಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಒಂದು ಕವನ ಹೇಳುತ್ತೇನೆ. ಅದೇನೆಂದರೆ, "ಹುಟ್ಟಿಂದೇನು ತರಲಿಲ್ಲ, ಹೋಗುತೇನು ಒಯ್ಯಲಿಲ್ಲ, ಸುಟ್ಟು ಸುಟ್ಟು ಸುಣ್ಣದಗಲಾಯಿತು ಈ ದೇಹ. ಹೊಟ್ಟೆ ಬಲು ಕೆಟ್ಟದೆಂದು ಎಷ್ಟೋ ಕಷ್ಟಪಟ್ಟು, ಪ್ರಾಣಬಿಟ್ಟು ಹೋಗುವಾಗ ಗೇಣು ಬಟ್ಟ ನಿನಗಿಲ್ಲವೋ" ನಾವು ಎಷ್ಟು ಕಾಲ ಜೀವಿಸುತ್ತೇವೆ ಎಂಬುದು ಮುಖ್ಯವಲ್ಲ, ಹೇಗೆ ಜೀವಿಸುತ್ತೇವೆ ಎಂಬುದು ಮುಖ್ಯ. ಜನನ ಎಂಬ ಮೂರಕ್ಷರದಲ್ಲಿ ಜನಿಸಿ, ಜೀವನ ಎಂಬ ಮೂರಕ್ಷರದಲ್ಲಿ ಜೀವಿಸಿ, ಮಾನವ ಎಂಬ ಮೂರಕ್ಷರದ ಸಮಾಧಿ ಎಂಬ ಮೂರಕ್ಷರಕ್ಕೆ ಕೊಡುಗೆ ಎಂಬ ಮೂರಕ್ಷರ ಕೊಟ್ಟಿದ್ದಾರೆ. ಶ್ರೀಯುತರು ಯಾರಿಗೂ ಸಹ ಕೊಡಲಿ ಹಾಕಿಲ್ಲ. ಅಂತಹ ಮಹಾಸ್ವಾಮಿಗಳು ದೈವಾಂಶ ಸಂಭೂತರು. ಮನುಷ್ಯನಿಗೆ ಆಸೆ, ದುರಾಸೆಗಳು ಬೇಕಾದಷ್ಟು ಇರುತ್ತವೆ. ಕೆಲವು ಸ್ವಾಮಿಗಳನ್ನು ನಾನು ನಂಬುವುದಿಲ್ಲ. ಇವರಲ್ಲಿ ಕಳ್ಳರೂ ಸಹ ಇದ್ದಾರೆ. ಒಳ್ಳೆಯ ಸ್ವಾಮಿಗಳು ಸಹ ಬಹಳಷ್ಟು ಜನರಿದ್ದಾರೆ. ಆದರೆ, ನಮ್ಮ ಆದಿಚುಂಚನಗಿರಿ

ಸ್ವಾಮೀಜಿಗಳು, ಕಾಗಿನೆಲೆ ಸ್ವಾಮೀಜಿಗಳು, ಸಿದ್ದಗಂಗಾ ಸ್ವಾಮೀಜಿಗಳು, ಸುತ್ತೂರು ಸ್ವಾಮೀಜಿಗಳು, ಇವರೆಲ್ಲರೂ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಒಬ್ಬ ಮನುಷ್ಯನಿಗೆ ಆಯು, ಮಿತ್ತಂ, ಕರ್ಮಂಚಾ ಅಂದರೆ, ಆಯಸ್ಸು, ವಿದ್ಯೆ, ಕೆಲಸ, ಹಣ, ಅಧಿಕಾರವನ್ನು ತಾಯಿಯ ಗರ್ಭದಲ್ಲಿಯೇ ಬರೆದಿರುತ್ತಾರೆ. ಆದ್ದರಿಂದ, ನಾವೇನು ಮಾಡುವುದಕ್ಕೆ ಆಗುವುದಿಲ್ಲ. ಸಾವು ಮತ್ತು ಪ್ರಕೃತಿ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಹುಟ್ಟಿದವರೆಲ್ಲ ಸಾಯಲೇ ಬೇಕು. ಸಾಯುವ ಮೊದಲು ಸಮಾಜಕ್ಕೆ ಏನನ್ನು ಕೊಡುಗೆಯಾಗಿ ಕೊಡಬೇಕೆಂಬುದು ಬಹು ಮುಖ್ಯ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕೂಡ ತಮ್ಮದೇ ಆಗಿರತಕ್ಕಂಥ ಹೆಸರನ್ನು ಗಳಿಸಿ ಸಮಾಜದ ಹರಿಕಾರರಾಗಿ ಸಮಾಜದ ಸುಧಾರಣೆಗೆ ತಮ್ಮದೇ ಆಗಿರತಕ್ಕಂಥ ಪಾತ್ರವನ್ನು ನಿರ್ವಹಿಸಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಮಾನ್ಯ ಶಂಕರಲಿಂಗೇಗೌಡರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ನನಗೆ ಒಂದು ಅನುಮಾನ ಆಗುತ್ತಿದೆ. ನಾನು ನಿಮಗೆ ಕೇಳುತ್ತಿದ್ದೇನೆ, ಇದು ಭಾಷಣವೇ ಅದನ್ನು ನಾವು ಬರಿ ಕೇಳಿ ಆನಂದಿಸುತ್ತಿದ್ದೇವಾ, ಅದು ಏನಾದರೂ ರೆಕಾರ್ಡಿಗೆ ಹೋಗುತ್ತಿದೆಯಾ ಎಂದು, ಇದು ರೆಕಾರ್ಡಿಗೆ ಹೋಗುವುದಕ್ಕೆ ಸಾಧ್ಯವಾಗಿದೆಯಾ? ಅದು ಒಂದು ನನಗೆ ಅರ್ಥವಾಗಿಲ್ಲ, ಅದಕ್ಕಾಗಿ ಅದನ್ನು ಕ್ಲಾರಿಫೈ ಮಾಡಿದರೆ ಅವರು ಮಾತನಾಡಿದ್ದಕ್ಕೂ ಸಮಾಧಾನ. ರೆಕಾರ್ಡಿನಲ್ಲಿದೆ ಎಂದರೆ ಮುಂದೆ ಬಂದವರಿಗೂ ಕೂಡ ಅದನ್ನು ನೋಡುವುದಕ್ಕೆ ಅನುಕೂಲವಾಗುತ್ತದೆ, ಅದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದೆ ಸ್ವೀಡಾಗಿ ಏನು ಮಾಡುವುದು.

ಶ್ರೀ ಟಿ.ಬಿ. ಜಯಚಂದ್ರ:- ನಿಮ್ಮ ಭಾಷಣ ಕೇಳುವುದಕ್ಕೆ ತುಂಬಾ ಆಸೆ. ಅದು ರೆಕಾರ್ಡಿಗೆ ಹೋಗಬೇಕಲ್ಲವೆ, ಅದನ್ನು ಬರೆದುಕೊಳ್ಳುವುದಕ್ಕೆ

ಆಗುತ್ತದೆಯಾ ಅಥವಾ ಇಲ್ಲವೋ ಎಂದು. ನೀವು ಮಾತನಾಡುವಾಗ ಅವರು ಸುಮ್ಮನೆ ಕುಳಿತಿರುವಂತೆ ಕಾಣುತ್ತಿತ್ತು, ಅದಕ್ಕಾಗಿ ನಾನು ಹೇಳಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಬರೆದುಕೊಳ್ಳುವುದಕ್ಕೆ ಆಗುವುದಿಲ್ಲವೇನ್ರಪ್ಪಾ. ಏನು ಮಾಡುವುದು. ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ನಾನು ಆಶುಭಾಷಣ ಮತ್ತು ಚರ್ಚಾಸ್ಪರ್ಧೆ ಎರಡರಲ್ಲಿಯೂ ಪ್ರೈಸ್‌ನ್ನು ತೆಗೆದುಕೊಂಡಿರುತ್ತೇನೆ. ಭಾಷಣ ನನಗೆ ಬಹುಮುಖ್ಯವಾದಂಥ ಆಸ್ತಿ. ಮನುಷ್ಯನಿಗೆ ಯಾವುದು ಇಲ್ಲ. ಊಟ, ತಿಂಡಿ ನನಗೆ ಬಹು ಮುಖ್ಯವಲ್ಲ. ಮನುಷ್ಯನಿಗೆ ಜ್ಞಾನಶಕ್ತಿಯೂ ಕೂಡ ಅಷ್ಟೇ ಮುಖ್ಯವಾದದ್ದು ಎಂದು ಇದೆ. ಜ್ಞಾನವಿಲ್ಲದ ಮನುಷ್ಯನ ಬದುಕು ಮರಳುಗಾಡಿನಲ್ಲಿ ಮನೆ ಕಟ್ಟಿದಂತೆ, ಅದಕ್ಕಾಗಿ ಒಂದು ಮಾತನ್ನು ಹೇಳುತ್ತೇನೆ. ಸ್ವಾಮೀಜಿಗಳು ವಿದ್ಯಾಸಂಸ್ಥೆಗಳನ್ನು ಮಾಡಿದ್ದಾರೆ. ಸುಮಾರು ಆಸ್ಪತ್ರೆಗಳನ್ನು ಕಟ್ಟಿಸಿದ್ದಾರೆ. ಆ ಆಸ್ಪತ್ರೆಗಳ ಮೂಲಕ ಬಡವರು ಮತ್ತು ದೀನದಲಿತರು ಜಾತಿ ಮತಗಳನ್ನು ಒಟ್ಟಿಗೆ ತೂರಿ ಇಲ್ಲ ತತ್ವಗಳ ಎಲ್ಲೆ ಮೀರಿ ದಿಗ್ ದಿಗಂತದ ಕಡೆಗೆ ಬರುವವರು ಇದ್ದಾರೆ. ಅದಕ್ಕೆ ಭಕ್ತರಾಗಿದ್ದವರು ಬಾಲಗಂಗಾಧರನಾಥ ಸ್ವಾಮೀಜಿ ಬಗ್ಗೆ ಹೇಳುತ್ತಾರೆಂದರೆ ಅದು ತಪ್ಪಾಗಲಾರದು. ಜೀವನದಲ್ಲಿ ಏನೂ ಇಲ್ಲ, ಯಾರೂ ಇಲ್ಲ, ಮನುಷ್ಯನಿಗೆ ಬೇಕಾದಷ್ಟು ಆಸೆ ಇರುತ್ತದೆ. ಒಬ್ಬ ಕವಿ ಹೇಳುತ್ತಾನೆ. ಮಕ್ಕಳು ಹುಟ್ಟಿದಾ ಕೂಡಲೇ ಅಳುತ್ತಾರೆ. ಏಕೆಂದರೆ ಮಂದ ಮತಿಗಳು ವಿಷದಾಂತಿಗೆ ಬಂದಿವೆ ಎಂದು, ನವಮಾಸಗಳು ಜನನಿಯ ಜಠರವನ್ನು ತೊರೆದು ಹೊರಬಂದಾಗ ಮಗು ಕರ್ಕಶವಾಗಿ ಅಳುತ್ತದೆ. ಆ ಮಗುವಿನ ತಾಯಿ ಅಕ್ಕರೆಯಿಂದ ಸತ್ಕರ ನೀರನ್ನು ಬಾಯಿಗೆ ಬಿಟ್ಟಾಗ ಮಗು ಬಾಯಿ ಚಪ್ಪರಿಸುತ್ತಾ ಹೇಳುತ್ತದೆ. ಹುಟ್ಟಿದರೆ ಬದುಕುವ ಆಸೆ, ಬದುಕಿದರೆ ಮದುವೆಯ ಆಸೆ, ಮದುವೆಯಾದರೆ ಮಕ್ಕಳ ಆಸೆ, ಮಕ್ಕಳಾದರೆ ಮನೆಯ ಆಸೆ. ಮನೆ ಆದರೆ ಈಗ ನಾವು ಇದ್ದೆವಲ್ಲಾ . ನಮಗೆ ಮಂತ್ರಿಗಳಾಗುವ ಆಸೆ.

ಅಧ್ಯಕ್ಷರು:– ಏನು ಮಾತನಾಡುತ್ತಿದ್ದೀರೆಂದು ಇಲ್ಲಿ ಯಾರಿಗೂ ಗೊತ್ತಾಗುತ್ತಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವುದು ಪ್ರತಿಯೊಂದು ಅಸೆಂಬ್ಲಿಯಲ್ಲಿ ರೆಕಾರ್ಡ್ ಆಗಬೇಕು. ನೀವು ಫಾಸ್ಟ್ ಆಗಿ ಮಾತನಾಡಿದರೆ ಹೇಗೆ? ಒಂದು ನಿಮಿಷ. ಸ್ಟೆನೋಗ್ರಾಫಿಯಲ್ಲಿ ಜ್ಯೂನಿಯರ್, ಸೀನಿಯರ್ ಮತ್ತು ಪ್ರೊಫೆಸಿಯೆನ್ಸಿ ಎಂದು ಇದೆ. ನಿಮಗೆ ಸೂಪರ್ ಪ್ರೊಫೆಸಿಯೆನ್ಸಿ ಬೇಕು. ದಯವಿಟ್ಟು ನಾನು ಅವರ ಹಿತದೃಷ್ಟಿಯಿಂದ ಕೇಳುತ್ತಿದ್ದೇನೆ. ನಿಧಾನಕ್ಕೆ ಮಾತನಾಡಿ ನಾವು ಕೂಡ ಆಲಿಸಿ ಅನುಭವ ಪಡೆದುಕೊಳ್ಳುತ್ತೇವೆ, ಅದಕ್ಕಾಗಿ ತಾವು ನಿಧಾನಕ್ಕೆ ಮಾತನಾಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನಿಧಾನಕ್ಕೆ ಎಂದು ಹೇಳುತ್ತಿದ್ದಾರೆ. ಹರಿಭಕ್ತಿಸಾರದಲ್ಲಿ ದೊಡ್ಡವರು ಹೇಳುತ್ತಾರೆ. 8 ಗೇಣಿನ ದೇಹ ರೋಮಗಳು 8 ಕೋಟಿ ಕೀಲುಗಳು 48 ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು ನೆಂಟನಿಂದ ತೆಗೆಳಿದೊಡನೆ ಹೆಂಟೆಯಿಂದ ಮುಚ್ಚುವರು, ಈ ದೇಹದಿಂದೇನು ಫಲ ಪುರುಷಾರ್ಥ? ಆತ್ಮ ಎನ್ನತಕ್ಕಂಥ ನೆಂಟ ಹೊರಟ ತಕ್ಷಣ ಒಣ ಹೆಂಟೆಯಿಂದ ಮುಚ್ಚುತ್ತಾರೆ. ಆತ್ಮಕ್ಕೆ ಸಾವು ಇಲ್ಲ. (ನೀವು ಎಲ್ಲರೂ ನಗುವುದರಿಂದ) ನಾನು ಅಪಹಾಸ್ಯಕ್ಕೆ ಗುರಿ ಆಗುತ್ತಿದ್ದೇನಾ ಎಂದು. ನಾನು ತಪ್ಪೇನಾದರೂ ಮಾತನಾಡುತ್ತಿದ್ದೇನಾ?

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಶಂಕರಲಿಂಗೇಗೌಡರಲ್ಲಿ ಒಂದು ಮನವಿ. ಸಂತಾಪ ಸೂಚನೆ ನಡೆಯುತ್ತಿದೆ. ಸಂತಾಪ ಸೂಚನೆಯಲ್ಲಿ ಅಗಲಿ ಹೋದ ಮಹನೀಯರ ಬಗ್ಗೆ ತಾವು ತಮ್ಮ ಸಂತಾಪವನ್ನು ಸೂಚಿಸಬೇಕು. ಸದನವನ್ನು ಕೂಡ ಗಾಂಭೀರ್ಯತೆಯಲ್ಲಿ ಇರುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಅಷ್ಟೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಸ್ವಾಮೀಜಿಯವರ ಕೊಡುಗೆಯ ಬಗ್ಗೆ ಹೇಳುವುದು ಮನುಷ್ಯನಾದ ನಾನು ಹೇಳತಕ್ಕಂಥದ್ದು ಅನಿವಾರ್ಯ, ಅದಕ್ಕಾಗಿ ಅದನ್ನು

ಅರ್ಥಮಾಡಿಕೊಳ್ಳಬೇಕು. ನೋಡಿ ನಾನೆ ಸತ್ತು ಹೋದೆ ಆಗ ಜನ ನನ್ನ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದರು ಎಂದು ಮಾತನಾಡಿಕೊಳ್ಳುತ್ತಾರೆ. ಆದರೆ ಸುರೇಶ್ ಕುಮಾರ್ ಸಾಯುವುದು ಬೇಡ, ಏಕೆಂದರೆ ಜನ ಅವರನ್ನು ಬಯ್ಯುತ್ತಿರಲಿ. ನಾವು ಸಂತಾಪ ಸೂಚನೆಯನ್ನು ಮಾಡುವಾಗ ಈ ಎಲ್ಲವನ್ನು ಅವರ ಬಗ್ಗೆ ವರ್ಣನೆಯನ್ನು ಮಾಡಿದಾಗ ಅವರು ಸ್ವರ್ಗ ಸೇರುತ್ತಾರೆನ್ನುವ ಭಾವನೆಗಳು ಇವೆ. ಸ್ವರ್ಗವನ್ನು ನಾವು ಕಣ್ಣಿನಿಂದ ನೋಡಿಲ್ಲ. ಸ್ವರ್ಗ ಮತ್ತು ನರಕ ನಾವು ನೋಡಿಲ್ಲ. ನಾವು ಮಾಡುವ ಒಳ್ಳೆಯ ಕೆಲಸವೇ ಸ್ವರ್ಗ, ನಾವು ಮಾಡುವ ಕೆಟ್ಟ ಕೆಲಸವೆ ನರಕ. ಅದಕ್ಕೆ ಒಂದು ಕತೆ ಇದೆ. ಆ ಕತೆಯನ್ನು ಹೇಳಬೇಕಾದದ್ದು ಅನಿವಾರ್ಯ.

ಅಧ್ಯಕ್ಷರು:– ಸಾಕು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಸಾಕು ಎನ್ನುತ್ತೀರಾ.

ಅಧ್ಯಕ್ಷರು:– ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಒಬ್ಬ ದೊಡ್ಡ ಸಾಹುಕಾರ ಅವನು 5–10 ರೂ.ಗಳಿಗೆ ಬಡ್ಡಿಯನ್ನು ಕೊಡುತ್ತಿದ್ದನು. ಅವನು ಒಂದು ನಾಯಿ ಸಾಕಿದ್ದನು ಅದು ಕುದುರೆಯ ಮರಿ ಇದ್ದಂತೆ ಇತ್ತು. ನಾಯಿ ಸತ್ತು ಹೋಯಿತು ಆಗ ಊರ ಜನರೆಲ್ಲರೂ ಹೋದರು. ಒಂದು ದಿವಸ ಗೌಡ ಸತ್ತು ಹೋದನು, ಆಗ ಯಾರೂ ಹೋಗಲಿಲ್ಲ. ಸರಿಸರಿಯಾಗಿ ಇದ್ದರೆ ಪರಿಪರಿಯಾಗಿ ನಿಂತರು. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಕ್ಕೋಸ್ಕರವಾಗಿ ನಾವು ಅವರನ್ನು ಶ್ಲಾಘನೆ ಮಾಡುತ್ತಿದ್ದೇವೆ. ಪಾಂಡವರೆಲ್ಲರೂ ಸತ್ತು ಹೋದಾಗ ಧರ್ಮರಾಯನು ಒಬ್ಬನೆ ಕೊನೆಗೆ ಉಳಿದುಕೊಂಡನು. ಶ್ರೀಕೃಷ್ಣನು ಬೇಕು ಎಂದು ಅನಬಹುದಾಗಿತ್ತು. ಆದರೆ ಅದರಲ್ಲಿ ಏನು ಇಲ್ಲ. ಸಾವು ಬದುಕಿನ ಮಧ್ಯದಲ್ಲಿ ನಾವು ಏನಾದರೂ ಜಂಜಾಟವನ್ನು ಆಡಿ ಸಮಾಜದ ಪಾವಿತ್ರತೆಗೆ ದಾಟಿಗೆ ಅದರ ಹಿನ್ನೆಲೆಯನ್ನು ಅರ್ಥ ಮಾಡಿಕೊಂಡು ಅರ್ಥೈಸಿಕೊಂಡು ಅರ್ಥಪೂರ್ಣವಾಗಿ, ಸೇವೆ ಎನ್ನತಕ್ಕಂಥ ಬೀಜವನ್ನು ಇಟ್ಟು ತ್ಯಾಗ ಎನ್ನತಕ್ಕಂಥ ನೀರನ್ನು ಹೊಯಿದಾಗ ಅದು ಹೆಮ್ಮರವಾಗಿ ಬೆಳೆದು

ಸಮಾಜಕ್ಕೆ ಕೊಡುಗೆಯನ್ನು ಕೊಡುತ್ತದೆ. ಅದನ್ನು ಸಮಾಜಕ್ಕೆ ಕೊಟ್ಟಿರತಕ್ಕಂಥವರು ಬಾಲಗಂಗಾಧರನಾಥ ಸ್ವಾಮೀಜಿಯವರು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಅಂಥ ಸ್ವಾಮೀಜಿಗಳು ಇನ್ನು ಹುಟ್ಟಿ ಬರಲಿ. ಅವರು ಭಗವಂತನ ಪಾದವನ್ನು ಈಗಾಗಲೇ ಸೇರಿದ್ದಾರೆ ಅದರಲ್ಲಿ ಎರಡು ಮಾತಿಲ್ಲ. ನಮಗೆ ಜಾತಿ ಹಿಡಿಸುವುದಿಲ್ಲ. ಸಿದ್ಧಗಂಗಾ ಸ್ವಾಮಿಯವರು ಕೂಡ ಒಳ್ಳೆಯವರು. ನಾನು ಏನು ಮಾತನಾಡಿದರೂ ಮಿಮಿಕ್ರಿ ಮಾಡುತ್ತಾನೆ ಎನ್ನುವವರ ತರಹ ಮಾತನಾಡುತ್ತೀರಿ.

ಶ್ರೀ ನೆ.ಲ. ನರೇಂದ್ರಸ್ವಾಮಿ:– ನಿಮ್ಮ ಮಾತು ಒಂದು ರೀತಿಯಲ್ಲಿ ಸ್ವಾಮೀಜಿಗಳು ಮಾತನಾಡಿದ ತರಹ ಇದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ನಾನು ಕ್ಯಾವಿ ಹಾಕಿಕೊಳ್ಳಲಾ.

ಅಧ್ಯಕ್ಷರು:– ಪ್ಲೀಸ್, ತಾವು ಬೇಗ ಮುಗಿಸಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಬಸವಣ್ಣನವರು ಒಂದು ಮಾತನ್ನು ಹೇಳುತ್ತಾರೆ. "ನುಡಿದರೆ ಮುತ್ತಿನ ಹಾರದಂತೆ ಇರಬೇಕು" "ನುಡಿದರೆ ಮಾಣಿಕ್ಯದ ದೀಪ್ತಿಯಂತೆ ಇರಬೇಕು" "ನುಡಿದರೆ ಸ್ಪಟಿಕದ ಸಲಾಕೆಯಂತೆ ಇರಬೇಕು" "ನುಡಿದರೆ ಲಿಂಗ ಮೆಚ್ಚಿ ಅಹುದು ಅಹುದು ಎನ್ನುವಂತಿರಬೇಕು" "ಇಲ್ಲದಿದ್ದರೆ ಮೆಚ್ಚನಾ ಕೂಡಲ ಸಂಗಮನಾಥ". ಅಂತಹ ಪವಿತ್ರವಾದಂಥ ಮಾತುಗಳನ್ನು ಆಡಲಿಕ್ಕೆ ಎಲ್ಲರೂ ಹುಟ್ಟಿ ಬರಬೇಕು. ಬಸವಣ್ಣನಂಹವರು ಈ ದೇಶಕ್ಕೆ ಮತ್ತೆ ಹುಟ್ಟಿ ಬರಬೇಕು. ಸಾಮಾನ್ಯ ಜನರ ಬದುಕಿನಲ್ಲಿ ನಾವೆಲ್ಲರೂ ಚೆಲ್ಲಾಟವಾಡಬಾರದು. ನಾವು ಸಮಾಜಕ್ಕೆ ಒಳ್ಳೆಯ ಕೊಡುಗೆಯನ್ನು ಕೊಡಬೇಕು. ನಾವು ಸಮಾಜಕ್ಕೆ ದ್ರೋಹವನ್ನು ಬಗೆಯಬಾರದು. ಯಾರು ಕಳ್ಳರು, ಕೊಲೆಗಡುಕರು ಆಗಬಾರದು. ಈ ಸದನದಲ್ಲಿ ಇವರ ಬಗ್ಗೆ ಸ್ಮರಣೆ ಮಾಡಲಿಕ್ಕೆ ತಾವು ಈ ಸಂತಾಪ ಸೂಚನೆಯ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ಮೃತರ ಗೌರವಾರ್ಥ ಎಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಎಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಿದರು)

ಅಧ್ಯಕ್ಷರು:– ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

ಶ್ರೀ ಸಿದ್ಧರಾಮಯ್ಯ:– ಮಾನ್ಯ ಅಧ್ಯಕ್ಷರೆ...,

ಅಧ್ಯಕ್ಷರು:– ಎರಡು ಪ್ರಕಟಣೆಗಳು ಇವೆ. ಮೊದಲು ಆ ಪ್ರಕಟಣೆಯನ್ನು ಮಾಡಿ ಬಿಡುತ್ತೇನೆ.